10 September 2026 Thursday SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

info.varthaman@gmail.com

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 266 Issue: 266 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

ಭಾವನಾಂತರಂಗ

ಹಳೇಯ ಆತ್ಮೀಯರು ಸಿಕ್ಕಾಗ ಮನಸ್ಸು ಮುದಗೊಳ್ಳುತ್ತದೆ,
ಹಳೆಯ ನೆನಪುಗಳು ಮತ್ತೇ ಹೊಳಪು ತರುತ್ತವೆ!

ಸ್ನೇಹಾ ಆನಂದ್

ಗುಂಡ್ಲುಪೇಟೆಯಲ್ಲಿ ರೈತರ ಬೃಹತ್ ಪ್ರತಿಭಟನೆ । ಸರ್ಕಾರದ ವಿರುದ್ಧ ಆಕ್ರೋಶ ಪುಟ ಸಂ. 2

ದಸರಾ ದೀಪಾಲಂಕಾರ ಹೊಸ ಕಲ್ಪನೆ ರೂಪಿಸಿ ರಮೇಶ್ ಬಂಡಿಸಿದ್ದೇಗೌಡ ಪುಟ ಸಂ. 4

ಸುಸ್ಥಿರ ಸಮಾಜ, ದೇಶದ ಪ್ರಗತಿಗಾಗಿ ಪ್ರತಿಯೊಬ್ಬರು ನವಸಾಕ್ಷರರಾಗಿ ಪುಟ ಸಂ. 4

ವಿದೇಶದಲ್ಲಿ ಅಕ್ರಮ ಹೂಡಿಕೆ?

ಸತೀಶ್ ಕುಟುಂಬದಿಂದ ಆಫ್ರಿಕಾದಲ್ಲಿ ಕಬ್ಬಿಣದ ಅದಿರು ಗಣಿಗಾರಿಕೆ

ಬೆಂಗಳೂರು: ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರ ನಿವಾಸ ಹಾಗೂ ಕಚೇರಿಗಳ ಮೇಲೆ ಜಾರಿ ನಿರ್ದೇಶನಾಲಯ ನಡೆಸಿರುವ ದಾಳಿ ಹಿಂದಿನ ಮಹತ್ವದ ಕಾರಣಗಳು ಬಹಿರಂಗವಾಗಿದೆ.

ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ ಉಲ್ಲಂಘಿಸಿ ವಿದೇಶದಲ್ಲಿ ಅಕ್ರಮವಾಗಿ ಹಣ ಹೂಡಿಕೆ ಮಾಡಿರುವ ಆರೋಪದ ಮೇಲೆ ಇಡಿ ತನಿಖೆ ತೀವ್ರಗೊಂಡಿದೆ.

ಸತೀಶ್ ಜಾರಕಿಹೊಳಿ ಕುಟುಂಬದ ವರು ನಿಯಮಗಳನ್ನು ಗಾಳಿಗೆ ತೂರಿವಿ ದೇಶಗಳಲ್ಲಿ ಕೋಟ್ಯಂತರ ರೂಪಾಯಿ ಅಕ್ರಮ ಹಣ ಹೂಡಿಕೆ ಮಾಡಿದ್ದಾರೆ ಎಂಬ ಆರೋಪ ಕೇಳಿಬಂದಿದೆ. ಸತೀಶ್ ಜಾರಕಿಹೊಳಿ ಆಫ್ರಿಕಾದಲ್ಲಿ ಕಬ್ಬಿಣದ ಅದಿರು ಗಣಿಗಾರಿಕೆ ವ್ಯವಹಾರದಲ್ಲಿ ಭಾರಿ ಮೊತ್ತದ ಹಣ ಹೂಡಿಕೆ ಮಾಡಿರುವುದು ತನಿಖೆ ವೇಳೆ ಬೆಳಕಿಗೆ ಬಂದಿದೆ ಎನ್ನಲಾಗಿದೆ.

ಆಫ್ರಿಕಾದಲ್ಲಿ ಅಸ್ತಿತ್ವದಲ್ಲಿರುವ ಈ ಗಣಿ ಗಾರಿಕೆ ಕಂಪನಿಗೆ ಪುತ್ರ ರಾಹುಲ್ ಜಾರ ಕಿಹೊಳಿ ನಿರ್ದೇಶಕರಾಗಿದ್ದಾರೆ. ಸತೀಶ್ ಜಾರಕಿಹೊಳಿ ಅವರ ಸಹೋದರಿ ಲಕ್ಷ್ಮಿ ಕೂಡ ನಿರ್ದೇಶಕಿ. ಲಕ್ಷ್ಮಿ ಅವರ ಪತಿ ಮಂಜು ನಾಥ್ ಅಬಕಾರಿ ಇಲಾಖೆಯಲ್ಲಿ ಹೆಚ್ಚುವರಿ ಆಯುಕ್ತರಾಗಿದ್ದಾರೆ. ಇವರ ಮೇಲೆ ಈ ಹಿಂದೆ ಇಡಿ ದಾಳಿ ನಡೆಸಿತ್ತು.

ಅಕ್ರಮ ಮಾರ್ಗಗಳ ಮೂಲಕ ವಿದೇ ಶಕ್ಕೆ ಹಣ ವರ್ಗಾವಣೆ ಮಾಡಲಾಗಿದೆ. ಕುಟುಂ ಬಸ್ಥರ ಹೆಸರಿನಲ್ಲಿ ವಿದೇಶಿ ಕಂಪನಿಗಳನ್ನು ಹುಟ್ಟುಹಾಕಿರುವ ಹಣಕಾಸು ಜಾಲದ ಕುರಿತು ಇಡಿ ಅಧಿಕಾರಿಗಳು ದಾಖಲೆಗ ಳನ್ನು ವಶಪಡಿಸಿಕೊಂಡು ಪರಿಶೀಲನೆ ನಡೆಸುತ್ತಿದ್ದಾರೆ. ಇಡಿ ದಾಖಲೆ ಪರಿಶೀಲನೆ ನಡೆಸಿದ ಬಳಿಕ ಮಾಧ್ಯಮಗಳಿಗೆ ನೀಡುವ ವಿವರದಲ್ಲಿ ಈ ಹೂಡಿಕೆಯ ಬಗ್ಗೆ ಮತ್ತಷ್ಟು ಮಾಹಿತಿ ಲಭ್ಯವಾಗಲಿದೆ.

ಏನಿದು ಫೆಮಾ ಕಾಯ್ದೆ?

ಫೆಮಾ ಎಂದರೆ ವಿದೇಶಿ ವಿನಿಮಯ ನಿರ್ವಹಣಾ ಕಾಯಿದೆ–1999. ಇದು ಭಾರತದಲ್ಲಿ ವಿದೇಶಿ ಕರೆನ್ಸಿ ವಹಿವಾಟುಗಳು, ವಿದೇಶಿ ಹೂಡಿಕೆಗಳು ಮತ್ತು ಗಡಿಯಾಚೆಗಿನ ಆರ್ಥಿಕ ಚಟುವಟಿಕೆಗಳನ್ನು ನಿಯಂತ್ರಿಸುವ ಅತ್ಯಂತ ಪ್ರಬಲವಾದ ಕಾನೂನಾಗಿದೆ.

ಬ್ಯಾಂಕುಗಳು ನೀಡುವ ಸಂಶಯಾಸ್ಪದ ವಿದೇಶಿ ಮಹಿವಾಟುಗಳ ವರದಿ, ಅಕ್ರಮ ಹವಾಲಾ ದಂಧೆಯ ಸುಳಿವು, ಅಥವಾ ವಿದೇಶಿ ನೇರ ಹೂಡಿಕೆಯಲ್ಲಿ ಪುಟ 2ಕ್ಕೆ

ಮನಿ ಲಾಂಡ್ರಿಂಗ್ ಆರೋಪ

ಅಕ್ರಮವಾಗಿ ಅಥವಾ ತಪ್ಪು ದಾರಿಯಲ್ಲಿ ಗಳಿಸಿದ ಕಪ್ಪು ಹಣವನ್ನು ಕಾನೂನುಬದ್ಧವಾಗಿ ಗಳಿಸಿದ ಹಣದಂತೆ ಬದಲಾಯಿಸುವ ಕಳ್ಳಾಟವೇ ಮನಿ ಲಾಂಡ್ರಿಂಗ್. ಇದು ಒಂದು ಆರ್ಥಿಕ ಅಪರಾಧವಾಗಿದೆ. ಮಾದಕ ದ್ರವ್ಯ ಮಾರಾಟ, ಭ್ರಷ್ಟಾಚಾರ, ಅಥವಾ ವಂಚನೆಯಿಂದ ಬಂದ ಹಣದ ಮೂಲವನ್ನು ಮರೆಮಾಚಲು ಬ್ಯಾಂಕ್ ವರ್ಗಾವಣೆ ಅಥವಾ ಬೇರೆ ವ್ಯವಹಾರಗಳ ಮೂಲಕ ಪುಟ 2ಕ್ಕೆ

ಸಚಿವ ಜಾರಕಿಹೊಳಿಗೆ ಇಡಿ ಶಾಕ್

ಸತೀಶ್ ಆಪ್ತರು ಸೇರಿದಂತೆ 18 ಸ್ಥಳಗಳಲ್ಲಿ ಇಡಿ ಅಧಿಕಾರಿಗಳ ಶೋಧ

ಬೆಂಗಳೂರು: ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹಾಗೂ ಅವರ ಸಂಬಂಧಿಕರು, ಆಪ್ತರಿಗೆ ಸೇರಿದ 18 ಸ್ಥಳಗಳ ಮೇಲೆ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಬುಧವಾರ ಬೆಳಗ್ಗೆ ಏಕಕಾಲಕ್ಕೆ ದಾಳಿ ನಡೆಸಿದ್ದಾರೆ.

ಕರ್ನಾಟಕ, ಮಹಾರಾಷ್ಟ್ರ ಹಾಗೂ ಗೋವಾ ಗಳಲ್ಲಿ ವಾಸವಿರುವ ಹಾಗೂ ವಿವಿಧ ಉದ್ಯಮ ಗಳಲ್ಲಿ ಪಾಲುದಾರರಾದ ಸತೀಶ ಜಾರಕಿಹೊಳಿ ಆಪ್ತರಿಗೂ ಇ.ಡಿ ಗಾಳ ಹಾಕಿದೆ.

ಬೆಂಗಳೂರು, ಬೆಳಗಾವಿ, ಗೋವಾ ಹಾಗೂ ಮಹಾರಾಷ್ಟ್ರದ ಹಲವೆಡೆ 25ಕ್ಕೂ ಹೆಚ್ಚು ಅಧಿ ಕಾರಿಗಳ ತಂಡವು ಕೇಂದ್ರ ಸಶಸ್ತ್ರ ಮೀಸಲು ಪಡೆಯ ಭದ್ರತೆಯೊಂದಿಗೆ ಪರಿಶೀಲನೆ ಮುಂದುವರಿಸಿದೆ.

ಬುಧವಾರ ಬೆಳಿಗ್ಗೆ ಸುಮಾರು 7 ಗಂಟೆಗೆ 18 ವಾಹನಗಳಲ್ಲಿ ಆಗಮಿಸಿದ ಇಡಿ ಅಧಿಕಾರಿ ಗಳು ಬೆಂಗಳೂರಿನ 6 ಕಡೆಗಳಲ್ಲಿ ಶೋಧ ಆರಂ ಭಿಸಿದ್ದಾರೆ. ದಾಳಿಯ ವೇಳೆ ಸಚಿವ ಸತೀಶ್ ಜಾರಕಿಹೊಳಿ ಅವರು ತಮ್ಮ ಅಧಿಕೃತ ಸರ್ಕಾರಿ ನಿವಾಸದಲ್ಲೇ ಇದ್ದರು. ಅವರ ಸಮ್ಮುಖದಲ್ಲೇ ಮಹ ತ್ವದ ದಾಖಲೆಗಳ ಪರಿಶೀಲನೆ ನಡೆಯುತ್ತಿದೆ.

ಸತೀಶ ಜಾರಕಿಹೊಳಿ ಮೂಲನೆಲೆ ಗೋಕಾಕ್ ನಗರದ ಹಿಲ್ ಗಾರ್ಡನ್ನಿನಲ್ಲಿರುವ ಅವರ ಸ್ವಂತ ಮನೆ ಮೇಲೂ ದಾಳಿ ಮುಂದುವರಿದಿದೆ. ಗೋಕಾಕ ನಗರದ ಅವರ ಇಬ್ಬರು ಆಪ್ತರಿಗೂ ಗಾಳ ಹಾಕಲಾಗಿದೆ.

ನಗರದ ಲಕ್ಷ್ಮೀಟೇಕಡಿ ಪ್ರದೇಶದಲ್ಲಿರುವ ಸತೀಶ ಅವರ ಆಪ್ತ ಡಾ.ಗಿರೀಶ ಸೋನವಾಲ್ಕರ ಮನೆ ಮೇಲೂ ದಾಳಿ ನಡೆದಿದೆ. ಬೆಳಗಾವಿಯ ರಾಜು ಧರಗಶೆಟ್ಟಿ, ವಿಠ್ಠಲ್ ಪರಸಣ್ಣವರ್ ಮನೆಗಳನ್ನೂ ಜಾಲಾಡಲಾಗಿದೆ. ಈ ಇಬ್ಬರೂ ಉದ್ಯಮಿಗಳು ಸಚಿವ ಸತೀಶ ಆಪ್ತರಾಗಿದ್ದಾರೆ.

ಬೆಳಗಾವಿ ನಗರದಲ್ಲಿರುವ ಸತೀಶ ಅವರ ಭಾಮೈದ ಅಬಕಾರಿ ಇಲಾಖೆ ಹೆಚ್ಚುವರಿ ಆಯುಕ್ತ ಮಂಜು ನಾಥ ಮನೆ ಮೇಲೆ ಎರಡನೇ ಬಾರಿ ದಾಳಿ ಮಾಡ ಲಾಗಿದೆ. ಕಳೆದ ಜೂನ್ 24ರಂದು ಮಂಜುನಾಥ ಮನೆ, ಕಚೇರಿ ಮೇಲೆ ದಾಳಿ ನಡೆದಿತ್ತು. ಆಗ 5.5 ಕೋಟಿ ನಗದು ಸೇರಿದಂತೆ 13.3 ಕೋಟಿ ಮೌಲ್ಯದ ಆಸ್ತಿ ವಶಕ್ಕೆ ಪಡೆಯಲಾಗಿತ್ತು. ಮಂಜುನಾಥ ಜೊತೆ ಹಾಗೂ ಸತೀಶ ಅವರ ಪುತ್ರ ರಾಹುಲ್ ಜಾರಕಿಹೊಳಿ ಹಲವು ಉದ್ಯಮಗಳಲ್ಲಿ ಪಾಲುದಾರ ಆಗಿದ್ದಾರೆ ಎಂಬ ವಿಷಯ ದಾಖಲೆ ಪರಿಶೀ ಲನೆ ವೇಳೆ ಗೊತ್ತಾಗಿತ್ತು. ಮತ್ತೊಮ್ಮೆ ಅವರ ಮನೆ ಮೇಲೆ ದಾಳಿ ನಡೆದಿದೆ.



ಜೈಲು ಸೇರಿದ್ದ ಮಂಜುನಾಥ್

2009ರಿಂದ 2013ರವರೆಗೆ ಮೈಸೂರಿನಲ್ಲಿ ಮಂಜುನಾಥ್ ಅಬಕಾರಿ ಡಿಸಿ ಆಗಿದ್ದ ಅವಧಿಯಲ್ಲಿ ಲಂಚದ ಪ್ರಕರಣವೊಂದರಲ್ಲಿ ಲೋಕಾಯುಕ್ತ ಪೊಲೀಸರು ಇವರನ್ನು ಬಂಧಿಸಿದ್ದರು. ಆ ವೇಳೆ 15 ದಿನಗಳ ಕಾಲ ಮೈಸೂರು ಕೇಂದ್ರ ಕಾರಾಗೃಹದಲ್ಲಿದ್ದ ಮಂಜುನಾಥ್ ಬಿಡುಗಡೆಯಾಗಿ ಬಂದ ಸಂದರ್ಭದಲ್ಲಿ ಅಧಿಕಾರಿಯ ಅಭಿಮಾನಿಗಳು ಜೈಲಿನಿಂದ ಬರೋಬ್ಬರಿ 2 ಕಿ.ಮೀ ವರೆಗೆ ಹೆಗಲ ಮೇಲೆ ಎತ್ತಿಕೊಂಡು ಮೆರವಣಿಗೆ ಮಾಡಿದ್ದರು. ಇಡೀ ರಾಜ್ಯಾದ್ಯಂತ ತೀವ್ರ ಚರ್ಚೆಗೆ ಗ್ರಾಸವಾಗಿತ್ತು.

ಅಧಿಕಾರ ದುರ್ಬಳಕೆ ಆರೋಪ

ಸತೀಶ್ ಜಾರಕಿಹೊಳಿ ಸಚಿವರಾಗಿದ್ದ ಸಂದರ್ಭ ಅಧಿಕಾರ ದುರ್ಬಳಕೆ ಮಾಡಿಕೊಂಡು 18 ಅನಧಿಕೃತ ಬಾರ್ ಲೈಸೆನ್ಸ್ ಕೊಡಿಸಲು ಸಹಾಯ ಮಾಡಿರುವ ಆರೋಪ ಕೇಳಿ ಬಂದಿದೆ. ಬಾರ್ ಲೈಸೆನ್ಸ್ ಹಂಚಿಕೆ ಮೂಲಕ ಬಂದ 178 ಕೋಟಿ ರೂ. ಹಣವನ್ನು ಅಕ್ರಮವಾಗಿ ವರ್ಗಾವಣೆ ಮಾಡಿದ್ದಾರೆ ಎನ್ನಲಾಗಿದೆ. ಅಕ್ರಮವಾಗಿ ಸಂಪಾದಿಸಿದ ಹಣವನ್ನು ವಿದೇಶಗಳಲ್ಲಿ ಹೂಡಿಕೆ ಮಾಡಲು ಸಚಿವರು ನೆರವು ನೀಡಿದ್ದಾರೆ ಎನ್ನಲಾಗಿದ್ದು, ಈ ಹಿಂದೆ 3 ಕೋಟಿ ರೂ. ವಿದೇಶಿ ಹಣ ಪತ್ತೆಯಾಗಿತ್ತು.ಕೇವಲ ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ ಅಷ್ಟೇ ಅಲ್ಲದೆ, ವಿದೇಶಗಳಲ್ಲಿ ಅಕ್ರಮ ಆಸ್ತಿ ಮತ್ತು ಹೂಡಿಕೆ ಹೊಂದಿರುವ ಗಂಭೀರ ಆರೋಪದ ಹಿನ್ನೆಲೆಯಲ್ಲಿ ಸತೀಶ್ ಜಾರಕಿಹೊಳಿ ಮೇಲೆ ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ ಅಡಿಯಲ್ಲೂ ಪ್ರಕರಣ ದಾಖಲಿಸಿಕೊಂಡು ಇಡಿ ತನಿಖೆ ಚುರುಕುಗೊಳಿಸಿದೆ.

ಮತ್ತಷ್ಟು ಕಾಂಗ್ರೆಸ್ ಶಾಸಕರ ಮೇಲೆ ಇಡಿ ದಾಳಿ ಸಾಧ್ಯತೆ

ಕೇಂದ್ರ ತನಿಖಾ ಸಂಸ್ಥೆಗಳ ದುರುಪಯೋಗ: ಸಿಎಂ ಡಿಕೆಶಿ ಆರೋಪ

ಬೆಂಗಳೂರು: ಮುಂದೆ ಇನ್ನೂ ಹಲವು ಕಾಂಗ್ರೆಸ್ ನಾಯಕರು, ಸಚಿವರು ಮತ್ತು ಶಾಸಕರ ಮೇಲೆ ತನಿಖಾ ಸಂಸ್ಥೆಗಳು ದಾಳಿ ನಡೆಸುವ ಸಾಧ್ಯತೆಯಿದೆ. ಹೀಗಾಗಿ ಪಕ್ಷದ ಎಲ್ಲ ಶಾಸಕರು ಮತ್ತು ಸಚಿವರಿಗೆ ಎಚ್ಚರಿಕೆಯಿಂದ ಇರುವಂತೆ ಈಗಾಗಲೇ ಸೂಚನೆ ನೀಡಿದ್ದೇನೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಸತೀಶ್ ಜಾರಕಿಹೊಳಿ ಅವರ ಮೇಲೆ ಜಾರಿ ನಿರ್ದೇಶನಾಲಯ (ಇ.ಡಿ) ಅಧಿಕಾರಿಗಳು ದಾಳಿ ನಡೆಸಿರುವ ಕುರಿತು ಬುಧವಾರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ರಾಜಕೀಯ ಲಾಭಕ್ಕಾಗಿ ಬಿಜೆಪಿ ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ಆರೋಪಿಸಿದರು.

ತನಿಖೆಗೆ ನಾವು ಹೆದರುವುದಿಲ್ಲ. ಆದರೆ ಸುಳ್ಳು ಕಥೆ ಕಟ್ಟುವುದು, ಸುಳ್ಳು ಆರೋಪ ಮಾಡುವುದು ಹಾಗೂ ಜನರನ್ನು ದಾರಿ ತಪ್ಪಿಸುವ ಪ್ರಯತ್ನವನ್ನು ಖಂಡಿಸುತ್ತೇವೆ ಎಂದು ಹೇಳಿದರು.

ಬಿಜೆಪಿ ನಾಯಕರ ವಿರುದ್ಧ ಮಾತ್ರ ಯಾವುದೇ ದಾಳಿ ನಡೆಯುವುದಿಲ್ಲ. ಬೋಪಿ ಹಗರಣದ ಬಗ್ಗೆ ಇಡಿ ಅವರು ಯಾಕೆ ಪ್ರವೇಶ ಮಾಡಲಿಲ್ಲ. ಬಿಡದಿ, ನೈಸ್ ಯೋಜನೆಗೆ ಸಹಿ ಹಾಕಿ ಆರಂಭಿಸಿದವರು ಬಿಜೆಪಿಯವರು. ಆದರೆ ಆರೋಪ ಮಾಡುವುದು ನಮ್ಮ ವಿರುದ್ಧ. ಸತ್ಯ ಆಚೆ ಬರಲಿದೆ ಎಂದು ಟೀಕಿಸಿದರು.

ಕಾಂಗ್ರೆಸ್ ಸರ್ಕಾರ ಸಚಿವ ಸತೀಶ್ ಜಾರಕಿಹೊಳಿಯವರ ಬೆಂಬಲಕ್ಕೆ ನಿಲ್ಲುತ್ತದೆಯೇ ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಅವರು, ನೂರಕ್ಕೆ ನೂರು ಬೆಂಬಲ ನೀಡುತ್ತೇವೆ. ಸಚಿವರ ಕುಟುಂಬದವರ ಮೇಲೆಯೂ ಇ.ಡಿ ದಾಳಿ ನಡೆಸಿರುವುದು ದುರದೃಷ್ಟಕರ. ತನಿಖಾಧಿಕಾರಿಗಳ ಪ್ರಶ್ನೆಗಳಿಗೆ ಅವರು ಸಮರ್ಥವಾಗಿ ಉತ್ತರ ನೀಡುತ್ತಾರೆ. ಅವರೊಬ್ಬ ಪ್ರಗತಿಪರ, ದೂರದೃಷ್ಟಿಯುಳ್ಳ ಪ್ರಾಮಾಣಿಕ ರಾಜಕಾರಣಿ. ಅವರು ಯಾವುದೇ ತಪ್ಪು ಎಸಗಿಲ್ಲ ಎಂಬ ವಿಶ್ವಾಸ ನನಗಿದೆ ಎಂದು ಹೇಳಿದರು.

ಬಿಜೆಪಿಯವರು ನೂರು ಪ್ರತಿಭಟನೆ ಮಾಡಲಿ, ನೂರು ಓಡಾಟ ಮಾಡಲಿ, ನೂರು ಪತ್ರಿಕಾಗೋಷ್ಠಿ ಪುಟ 2ಕ್ಕೆ

ದಲಿತ ನಾಯಕರ ಬೆಳವಣಿಗೆ ಸಹಿಸುತ್ತಿಲ್ಲ

ಸತೀಶ್ ಜಾರಕಿಹೊಳಿ ಅವರು ಪ್ರಬಲವಾಗಿ ಬೆಳೆಯುತ್ತಿರುವ ನಾಯಕನಾಗಿರುವುದನ್ನು ಕೆಲವರಿಗೆ ಸಹಿಸಲಾಗುತ್ತಿಲ್ಲ. ಅವರನ್ನು ರಾಜಕೀಯವಾಗಿ ಕುಗ್ಗಿಸುವ ಪ್ರಯತ್ನ ನಡೆಯುತ್ತಿದೆ. ಸತೀಶ್ ಜಾರಕಿಹೊಳಿ ಬೆಳವಣಿಗೆ ಸಹಿಸಿಕೊಳ್ಳಲು ಆಗದೆ ತೊಂದರೆ ಕೊಡಲು ಪ್ರಯತ್ನಿಸುತ್ತಿದ್ದಾರೆ. ಆದರೆ ಇದು ಅವರಿಗೆ ತಿರುಗುಬಾಣವಾಗಲಿದೆ. ನನ್ನ ಮೇಲೂ ದಾಳಿ ಮಾಡಿ ಬಂಧಿಸಿದ್ದರು. ಆದರೆ ಇಂದು ಏನಾಗಿದೆ? ನಾನು ರಾಜ್ಯದ ಸಿಎಂ ಆಗಿರುವೆ ಎಂದರು.

ವಾಲ್ಮೀಕಿ ನಿಗಮದ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಗೇಂದ್ರ ಅವರು ಸ್ವಯಂಪ್ರೇರಿತವಾಗಿ ರಾಜೀನಾಮೆ ನೀಡಿದ ಬಳಿಕವೂ ಈ ಪುಟ 2ಕ್ಕೆ

ಹಿರಿಯರಿಗೆ ನೆಮ್ಮದಿ ತಾಣ ಅಗತ್ಯ

ಜೆಎಸ್ಎಸ್ ಹಿರಿಯರ ಮನೆ ಉದ್ಘಾಟಿಸಿ ಯಡಿಯೂರಪ್ಪ ಅಭಿಪ್ರಾಯ

ಮೈಸೂರು: ಸಂಧ್ಯಾಕಾಲದಲ್ಲಿ ಪ್ರೀತಿ, ವಾತ್ಸಲ್ಯ, ಕಾರುಣ್ಯ ತುಂಬುವ ಹಿರಿಯರ ನೆಮ್ಮದಿ ತಾಣಗಳ ಅಗತ್ಯವಿದೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅಭಿಪ್ರಾಯಪಟ್ಟರು.

ಜೆಎಸ್ಎಸ್ ಮಹಾವಿದ್ಯಾಪೀಠದಿಂದ ರಾಮಕೃಷ್ಣ ನಗರ ವಾಸು ಬಡಾವಣೆಯಲ್ಲಿ ನಿರ್ಮಿಸಿರುವ ಜೆಎಸ್ಎಸ್ ಹಿರಿಯರ ಮನೆ ಹಾಗೂ ಶಿವದೇವಾಲಯ ಉದ್ಘಾಟಿಸಿ ಅವರು ಮಾತನಾಡಿದರು.

ಭಾರತೀಯ ಸಂಸ್ಕೃತಿಯಲ್ಲಿ ಹಿರಿಯರನ್ನು ಅತ್ಯಂತ ಗೌರವಯುತವಾಗಿ ನಡೆಸಿಕೊಳ್ಳಲಾಗುತ್ತಿತ್ತು. ಹಿರಿಯರ ಮಾತಿಗೆ ಮನ್ನಣೆ ಇತ್ತು. ಬದಲಾದ ಕಾಲಘಟ್ಟದಲ್ಲಿ ಕುಟುಂಬ ನಿರ್ವಹಣೆಗೆ ಪತಿ, ಪತ್ನಿ ಮಕ್ಕಳು ಕೂಡಾ ದುಡಿಯವ ಅನಿವಾರ್ಯತೆ ಇದೆ. ಅಲ್ಲದೇ ಎಷ್ಟು ಮಕ್ಕಳು ದೂರದ ಊರು, ವಿದೇಶಗಳಿಗೆ ಹೋಗುತ್ತಿದ್ದಾರೆ. ಇಂತಹ ಸಮಯದಲ್ಲಿ ಮನೆಯಲ್ಲಿ ಹಿರಿಯರನ್ನು ನೋಡಿಕೊಳ್ಳಲು ಯಾರು ಇಲ್ಲದ ಪರಿಸ್ಥಿತಿ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿದೆ ಎಂದು ವಿಷಾದಿಸಿದರು.

ಬದಲಾದ ಸನ್ನಿವೇಶದಲ್ಲಿ ಹಿರಿಯ ಮನೆಗಳು ಭಾರತೀಯ ಸಂಸ್ಕೃತಿಯಲ್ಲಿಯೂ ಬೇಕಾಗಿದೆ. ಸಂಧ್ಯಾಕಾಲದಲ್ಲಿರುವ ಹಿರಿಯರನ್ನು ಪ್ರೀತಿ, ವಾತ್ಸಲ್ಯದಿಂದ ನೋಡಿಕೊಳ್ಳಬೇಕಿದೆ. ಅವರಿಗೆ ವೈದ್ಯಕೀಯ ಉಪಚಾರಗಳು, ಆರೈಕೆ ಬೇಕಾಗುತ್ತದೆ. ಅದಕ್ಕೆ ಪೂರಕವಾಗಿ ಸುತ್ತೂರು ಶ್ರೀಗಳು ಹಿರಿಯರ ಮನೆ ನಿರ್ಮಿಸಿ ಅನುಕೂಲ ಮಾಡಿಕೊಟ್ಟಿದ್ದಾರೆ ಎಂದು ಹೇಳಿದರು.

ಶಿಕ್ಷಣ, ಆರೋಗ್ಯ, ಧಾರ್ಮಿಕತೆಯ ಮೂಲಕ ಸಮಾಜದ ಪರಿವರ್ತನೆ ಸೇವಾ ಕಾರ್ಯವನ್ನು ಪುಟ 2ಕ್ಕೆ

ವಿದೇಶಗಳಲ್ಲಿ ವ್ಯವಹಾರ ತಪ್ಪೇ?

ವಿದೇಶದಲ್ಲಿ ಹೂಡಿಕೆ, ವ್ಯಾಪಾರ ಮಾಡಲು ಕಾನೂನಿನಡಿ ಅವಕಾಶವಿದೆ. ಅವರ ಕುಟುಂಬ ಸದಸ್ಯರು ವಿದೇಶದಲ್ಲಿ ವ್ಯವಹಾರ ಮಾಡುವುದು ತಪ್ಪಲ್ಲ. ನನ್ನ ಕುಟುಂಬದವರೂ ವಿದೇಶದಲ್ಲಿ ವ್ಯವಹಾರ ಇರಿಸಿಕೊಳ್ಳುವು ದನ್ನು ನಾನು ನಿರ್ಬಂಧಿಸಲು ಸಾಧ್ಯವೇ? ಈ ಇಡಿ ದಾಳಿಯನ್ನು ರಾಜಕೀಯ ಉದ್ದೇಶದಿಂದ ಮಾಡಲಾಗಿದೆ. ಈ ಧೋರಣೆಯಿಂದಾಗಿಯೇ 12 ಲಕ್ಷಕ್ಕೂ ಹೆಚ್ಚು ಉದ್ಯಿ ಪುಟ 2ಕ್ಕೆ



ಕೆಪಿಎಸ್‌ಸಿ ಅಕ್ರಮ ನೇಮಕಾತಿ: ಅಭ್ಯರ್ಥಿ ಮನೆ ಮೇಲೆ ದಾಳಿ

ಕಲಬುರಗಿ: ಕೆಪಿಎಸ್‌ಸಿ ನೇಮಕಾತಿ ಅಕ್ರಮ ಪ್ರಕರಣಕ್ಕೆ ಸಂಬಂಧಿಸಿದಂತೆ ಕಲಬುರಗಿಯ ಅಭ್ಯರ್ಥಿ ಮನೆ ಮೇಲೆ ಸಿಐಡಿ ಅಧಿಕಾರಿಗಳು ದಾಳಿ ನಡೆಸಿದ್ದಾರೆ.

ಪಶುವೈದ್ಯ ನೇಮಕಾತಿ ಅಭ್ಯರ್ಥಿ ಮಮತಾ ಮನೆ ಮೇಲೆ ಸಿಐಡಿ ದಾಳಿ ನಡೆದಿದೆ. ಕಲಬುರಗಿ ನಗರದ ನ್ಯೂ ಓಜಾ ಲೇಔಟ್‌ನಲ್ಲಿರುವ ಮನೆ ಮೇಲೆ ದಾಳಿ ನಡೆಸಿ ಪರಿಶೀಲನೆ ಮಾಡಿದ್ದಾರೆ. ಕೆಪಿಎಸ್‌ಸಿ ಸದಸ್ಯೆ ಶಾಂತಾ ಹೊಸಮನಿ ಕಡೆಯಿಂದ ಅಭ್ಯರ್ಥಿ ಪುಟ 2ಕ್ಕೆ



ಮೈಶುಗರ್ ಬಾಯ್ಲರ್‌ಗೆ ಬಿದ್ದು ಕಾರ್ಮಿಕ ಸಾವು

ಮಂಡ್ಯ: ಮೈಶುಗರ್ ಕಾರ್ಖಾನೆ ಬಾಯ್ಲರ್‌ಗೆ ಬಿದ್ದು ಕಾರ್ಮಿಕನೊಬ್ಬ ದುರ್ಮರಣಕ್ಕೀಡಾದ ಘಟನೆ ನಡೆದಿದೆ. ಕೆ.ಶೆಟ್ಟಿಹಳ್ಳಿಯ ಚರಣ್ ಕುಮಾರ್ (33) ಮೃತ ಕಾರ್ಮಿಕ.

ಶ್ರೇಯ ಏಜೆನ್ಸಿಯಡಿ ಗುತ್ತಿಗೆ ಆಧಾರದಲ್ಲಿ ಚರಣ್ ಒಂದೂವರೆ ವರ್ಷದಿಂದ ಕೆಲಸ ಮಾಡುತ್ತಿದ್ದ. ಸೆಪ್ಟೆಂಬರ್ 3ರಂದು ಬಾಯ್ಲರ್‌ಗೆ ಬಿದ್ದಿದ್ದ. ಆತನನ್ನು ಮೈಸ

ಶ್ರದ್ಧೆಯಿಂದ ಓದಿದರೆ ವಿದ್ಯಾರ್ಥಿಗಳ ಭವಿಷ್ಯ ಉಜ್ವಲ

ಗುಂಡ್ಲುಪೇಟೆ: ವಿದ್ಯಾರ್ಥಿಗಳು ತಮ್ಮ ಭವಿಷ್ಯದ ಬಗ್ಗೆ ಸ್ಪಷ್ಟವಾದ ಗುರಿ ಇಟ್ಟುಕೊಂಡು ಶ್ರದ್ಧೆಯಿಂದ ಅಧ್ಯಯನ ಮಾಡಿದರೆ ಉತ್ತಮ ಪ್ರತಿಫಲ ಪಡೆಯಲು ಸಾಧ್ಯ ಎಂದು ಶಾಸಕ ಎಚ್.ಎಂ. ಗಣೇಶಪ್ರಸಾದ್ ಹೇಳಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಯುವ ಸೌರಭ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳು ತಮ್ಮ ಭವಿಷ್ಯದ ಬಗ್ಗೆ ಗುರಿ ಇಟ್ಟುಕೊಂಡು ಉತ್ತಮವಾಗಿ ಅಧ್ಯಯನ ಮಾಡಬೇಕು. ಶಿಕ್ಷಕರು ತಮ್ಮ ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸುವುದರ ಜೊತೆಗೆ ವಿದ್ಯಾರ್ಥಿಗಳಿಗೆ ಭವಿಷ್ಯದ ಮಾರ್ಗದರ್ಶಕರಾಗಬೇಕು ಎಂದು ತಿಳಿಸಿದರು.

ಕಾಲೇಜಿನಲ್ಲಿ ಈ ಹಿಂದೆ ಸುಮಾರು 900 ವಿದ್ಯಾರ್ಥಿಗಳಿದ್ದರೂ, ಇದೀಗ ವಿದ್ಯಾರ್ಥಿಗಳ ಸಂಖ್ಯೆ 700ಕ್ಕೆ ಇಳಿದಿದೆ. ವಿದ್ಯಾರ್ಥಿಗಳ ಹಾಜರಾತಿ ಕಡಿಮೆಯಾಗಲು ಬಸ್ ಸಮಸ್ಯೆಯೂ ಕಾರಣವಾಗಿದ್ದು, ಸಮಸ್ಯೆ ಬಗೆಹರಿಸುವಂತೆ ಸಾರಿಗೆ ಡಿಪೋ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಬಸ್ ಸೌಲಭ್ಯ ಸುಧಾರಿಸಿದರೆ ಹೆಚ್ಚಿನ ವಿದ್ಯಾರ್ಥಿಗಳು ಕಾಲೇಜಿಗೆ ಆಗಮಿಸಲು ಸಾಧ್ಯವಾಗಲಿದೆ ಎಂದರು.

ಕಾಲೇಜಿನಲ್ಲಿ ಶುದ್ಧ ಕುಡಿಯುವ ನೀರಿನ ಘಟಕದ ವ್ಯವಸ್ಥೆ ಕಲ್ಪಿಸುವ ಕಾಮಗಾರಿ ಪೂರ್ಣಗೊಂಡಿದ್ದು, ಶೀಘ್ರದಲ್ಲೇ ಉದ್ಘಾಟಿಸಲಾಗುವುದು. ಮುಂದಿನ ದಿನಗಳಲ್ಲಿ ಕಾಂಪೌಂಡ್ ಸೇರಿದಂತೆ ಅಗತ್ಯ ಮೂಲಸೌಕರ್ಯಗಳ ಕಾಮಗಾರಿಗಳಿಗೆ ಗುದ್ದಲಿಪೂಜೆ ನೆರವೇರಿಸಲಾಗುವುದು. ಈ ವರ್ಷದ ಹಾಗೂ ಮುಂದಿನ ವರ್ಷದ ಅನುದಾನವನ್ನು ಒಟ್ಟಿಗೆ ನೀಡಲು ಮುಖ್ಯಮಂತ್ರಿ ಮುಂದಾಗಿರುವ ಹಿನ್ನೆಲೆಯಲ್ಲಿ ಅಗತ್ಯ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು ಎಂದು ಹೇಳಿದರು.

ಗ್ರಾಮೀಣ ಪ್ರದೇಶಗಳಲ್ಲಿ ವೈದ್ಯಕೀಯ ಸೇವೆ ಸಲ್ಲಿಸಲು ವೈದ್ಯರು ಹಾಗೂ ವೈದ್ಯಕೀಯ ವಿದ್ಯಾರ್ಥಿಗಳು ಹಿಂದೇಟು ಹಾಕುತ್ತಿರುವುದು ಸಮಸ್ಯೆಯಾಗಿದೆ. ಗುಂಡ್ಲು ಪೇಟೆಯಲ್ಲಿಯೂ ವೈದ್ಯರ ಕೊರತೆ ಇದ್ದು, ಈ ಸಮಸ್ಯೆ ಪರಿಹಾರಕ್ಕೆ ಅಗತ್ಯ ಕ್ರಮ ಕೈಗೊಳ್ಳಬೇಕಿದೆ ಎಂದರು.

ಬದಲಾದ ಪರಿಸ್ಥಿತಿಯಲ್ಲಿ ತಾವು ರಾಜಕೀಯಕ್ಕೆ ಬರಲು ಸಾಧ್ಯವಾಯಿತು. ಪ್ರತಿಯೊಬ್ಬರೂ ತಮ್ಮ ಊರು ಹಾಗೂ ನಾಡಿನ ಬಗ್ಗೆ ಅಭಿಮಾನ ಹೊಂದಬೇಕು. ವಿದ್ಯಾರ್ಥಿ ಜೀವನದಲ್ಲಿ ತಾವು ಕಂಡಿರುವ ಕನಸುಗಳು ನನಸಾಗಲಿ ಎಂಬುದೇ ತಮ್ಮ ಆಶಯ ಎಂದು ಗಣೇಶ ಪ್ರಸಾದ್ ಹೇಳಿದರು. ಕಾರ್ಯಕ್ರಮದಲ್ಲಿ ಚಾಮುಲ್ ನಿರ್ದೇಶಕ ಎಚ್.ಎಸ್. ನಂಜುಂಡಪ್ರಸಾದ್, ಪುರಸಭೆ ಮಾಜಿ ಉಪಾಧ್ಯಕ್ಷ ಅಣ್ಣಯ್ಯಸ್ವಾಮಿ, ಗ್ಯಾರಂಟಿ ಯೋಜನೆಯ ಉಮಾಪತಿ, ಮಾಜಿ ಪುರಸಭೆ ಅಧ್ಯಕ್ಷ ಕಿರಣ್, ಎಪಿಎಂಸಿ ಅಧ್ಯಕ್ಷ ವಿರೂಪಾಕ್ಷ, ಮೋಹನ್, ಎಸ್ಸಾ ಅರ್ಲೇ ರಾಜಶೇಖರ್ ಶಿಕ್ಷಣ ಇಲಾಖೆ ಮೈಸೂರು ವಲಯದ ಜಂಟಿ ನಿರ್ದೇಶಕಿ ಡಾ. ಡಿ.ಎಸ್. ಪ್ರತಿಮಾ, ಶಾಲಾ ಶಿಕ್ಷಣ ಇಲಾಖೆಯ ಸಹಾಯಕ ನಿರ್ದೇಶಕ ಎ.ಬಿ. ನಾಗೇಂದ್ರ ಪ್ರಸಾದ್, ಮಂಜುನಾಥ್ ಕೆ.ಎಸ್., ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಿಡಿಸಿ ಕಾರ್ಯಾಧ್ಯಕ್ಷ ಬಿ. ಕುಮಾರಸ್ವಾಮಿ, ಪುಟ್ಟಸ್ವಾಮಿ, ಮಲ್ಲು, ವಿ.ಆರ್. ಶಾಂತರಾಮ್, ಮಧುಕುಮಾರ್, ಪ್ರಾಂಶುಪಾಲ ಮದನ್ ಕುಮಾರ್ ಸೇರಿದಂತೆ ಉಪಸ್ಥಿತರಿದ್ದರು.

ಮೊದಲ ಪುಟದಿಂದ

ಹಿರಿಯರಿಗೆ ನೆಮ್ಮದಿ ತಾಣ ಅಗತ್ಯ

ಸುತ್ತೂರು ಪರಂಪರೆ ನಡೆಸಿಕೊಂಡು ಬಂದಿರುವುದರಿಂದ ಸಾವಿರಾರು ಕುಟುಂಬಗಳಿಗೆ ಬದುಕಿನ ಹೊಸ ದಿಕ್ಕು ನೀಡಿದೆ. ಸರ್ಕಾರ ಮಾಡಬೇಕಾದ ಕಾರ್ಯವನ್ನು ಸುತ್ತೂರು ಶ್ರೀಗಳು ಮಾಡಿಕೊಂಡು ಬರುತ್ತಿದ್ದಾರೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಸಹಕಾರ ಮಹಾಮಂಡಲದ ಅಧ್ಯಕ್ಷರಾದ ಶಾಸಕ ಜಿ.ಟಿ.ದೇವೇಗೌಡ, ಶ್ರೀರಾಮಕೃಷ್ಣ ಮಠದ ಅಧ್ಯಕ ಸ್ವಾಮಿ ಮುಕ್ತಿದಾನಂದಜೀ ಮಹಾರಾಜ್, ಅವಧೂತ ದತ್ತಪೀಠದ ಶ್ರೀಗಣಪತಿ ಸಚ್ಚಿದಾನಂದ ಸ್ವಾಮೀಜಿ, ಕನಕಪುರ ದೇಗುಲಮಠದ ಡಾ.ಶ್ರೀಚನ್ನಬಸವ ಸ್ವಾಮೀಜಿ, ಮಾಜಿ ಸಚಿವೆ ರಾಣಿಸತೀಶ್ ಮಾತನಾಡಿದರು. ದಾನಿಗಳಾದ ಸುಧಾ ಮೃತ್ಯುಂಜಯ, ರಾಘವೇಂದ್ರ, ಶಿವಕುಮಾರ್, ಮಹೇಂದ್ರ ಇತರರು ಇದ್ದರು.

ಇಡಿ ದಾಳಿ ಸಾಧ್ಯತೆ

ನಡೆಸಲಿ. ಯಾರಿಗೆ ಏನು ಮಾಡಬೇಕೋ ಮಾಡಲಿ. ನಾವು ಯಾವುದಕ್ಕೂ ಹೆದರುವುದಿಲ್ಲ ಎಂದು ಡಿಕೆಶಿ ಹೇಳಿದರು.

ವಿಪಕ್ಷಗಳ ಟೀಕೆಗಳು ಹಾಗೂ ತನಿಖಾ ಕ್ರಮಗಳು ಕಾಂಗ್ರೆಸ್ ನಾಯಕರನ್ನು ಮತ್ತಷ್ಟು ಎಚ್ಚರಿಕೆಯಿಂದ ಇರುವಂತೆ ಮಾಡುತ್ತವೆ. ನಮಗೆ ಹೆಚ್ಚು ವಿರೋಧಿಗಳು ಇದ್ದಷ್ಟೂ ನಾವು ಹೆಚ್ಚು ಎಚ್ಚರಿಕೆಯಿಂದ ಇರಬೇಕಾಗುತ್ತದೆ ಎಂದರು.

ಕಾವೇರಿ: ಸುಪ್ರೀಂ ಕೋರ್ಟ್ ಮೊರೆ

ಅವರು ಆತಂಕ ವ್ಯಕ್ತಪಡಿಸಿದರು. ಯಾವುದೇ ಕಾರಣಕ್ಕೂ ಸಿಡಬ್ಲ್ಯುಆರ್‌ಸಿ ಆದೇಶವನ್ನು ಸಮರ್ಥಿಸಿಕೊಳ್ಳುವುದಿಲ್ಲ. ಈ ಹಿಂದೆ 100 ಟಿಎಂಸಿ ನೀರು ಬಿಡಲಾಗಿತ್ತು. ಆದರೆ ಈ ಬಾರಿ 30 ಟಿಎಂಸಿ ಮಾತ್ರ ನೀಡಿದ್ದೇವೆ. ಆದರೂ ತಮಿಳುನಾಡು ಸರ್ಕಾರ ನಿರಂತರವಾಗಿ ಒತ್ತಡ ಹೇರುತ್ತಲೇ ಇದೆ. ಕಾವೇರಿ ವಿಚಾರದಲ್ಲಿ ರಾಜ್ಯದ ಹಿತ ಕಾಪಾಡಲು, ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸಲಹೆ ನೀಡಿರುವಂತೆ ಸುಪ್ರೀಂ ಕೋರ್ಟ್ನಲ್ಲಿ ವಾದ ಮಂಡಿಸಲು ವಿಶೇಷ ವಕೀಲರನ್ನು ನೇಮಿಸುವ ಕುರಿತು ಸರ್ಕಾರ ಗಂಭೀರವಾಗಿ ಚಿಂತನೆ ನಡೆಸಲಿದೆ. ಜತೆಗೆ ಅವರೊಟ್ಟಿಗೂ ಸಹ ಮಾತನಾಡಲಾಗುದು ವಿವರಿಸಿದರು.

ಏನಿದು ಫೆಮಾ ಕಾಯ್ದೆ?

ನಿಯಮ ಉಲ್ಲಂಘನೆಯ ದೂರುಗಳು ಬಂದಾಗ ಇಡಿ ಸ್ವತಃ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸುತ್ತದೆ. ಫೆಮಾ ಒಂದು ಸಿವಿಲ್ ಕಾನೂನು ಆಗಿದೆಯೇ ಹೊರತು ಕ್ರಿಮಿನಲ್ ಕಾನೂನಲ್ಲ.

ಫೆಮಾ ದಾಳಿ ಅಥವಾ ತನಿಖೆಯ ಸಮಯದಲ್ಲಿ ಸಿಕ್ಕ ಹಣ ಕೇವಲ ವಿದೇಶಿ ವಿನಿಮಯ ಉಲ್ಲಂಘನೆಯಲ್ಲ, ಬದಲಿಗೆ ಅದು ಭ್ರಷ್ಟಾಚಾರ, ವಂಚನೆ, ಡ್ರಗ್ಸ್ ಅಥವಾ ದೇಶದ್ರೋಹದ ಚಟುವಟಿಕೆಗಳ ಮೂಲಕ ಗಳಿಸಿದ ಕಪ್ಪು ಹಣ ಎಂದು ಇಡಿಗೆ ಪುರಾವೆ ಸಿಕ್ಕರೆ ಇಡಿ ತಕ್ಷಣವೇ ಆ ಪ್ರಕರಣದ ಮೇಲೆ ಕಾಯ್ದೆಯಡಿ ಕ್ರಿಮಿನಲ್ ಕೇಸ್ ದಾಖಲಿಸುತ್ತದೆ. ಇಡಿಗೆ ವಾರಂಟ್ ಇಲ್ಲದೆಯೇ ಆರೋಪಿಯನ್ನು ತಕ್ಷಣವೇ ಬಂಧಿಸುವ ಸಂಪೂರ್ಣ ಅಧಿಕಾರ ಇಡಿಗೆ ಇದೆ. ಹೀಗಾಗಿ ಸಚಿವ ಸತೀಶ್ ಜಾರಕಿಹೊಳಿ ಮತ್ತು ಆಪ್ತರಿಗೆ ಬಂಧನದ ಆತಂಕ ಎದುರಾಗಿದೆ.

ಅಭ್ಯರ್ಥಿ ಮನೆ ಮೇಲೆ ದಾಳಿ

ಮಮತಾ ನೇಮಕವಾಗಿದ್ದರು. ಶಾಂತಾ ಹೊಸಮನಿ ಮೂಲಕ ಡೀಲ್ ಮಾಡಿ ನೇಮಕವಾಗಿತ್ತು ಎನ್ನಲಾಗಿದೆ.

ಮನಿ ಲಾಂಡ್ರಿಂಗ್ ಆರೋಪ

ಹಣವನ್ನು ತಿರುಗಿಸುವುದೇ ಮನಿ ಲಾಂಡ್ರಿಂಗ್.

ಪಿಎಂಎಲ್‌ಎ ಕಾನೂನಿನ ಅಡಿಯಲ್ಲಿ ಜಾರಿ ನಿರ್ದೇಶನಾಲಯಕ್ಕೆ ಅಕ್ರಮ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲು, ಆಸ್ತಿಯನ್ನು ಜಪ್ತಿ ಮಾಡಲು ಮತ್ತು ಆರೋಪಿಗಳನ್ನು ಬಂಧಿಸಲು ಅಧಿಕಾರ ಸಿಗುತ್ತದೆ.

ಬೆಳವಣಿಗೆ ಸಹಿಸುತ್ತಿಲ್ಲ

ವಿಚಾರವನ್ನು ರಾಜಕೀಯಗೊಳಿಸಲಾಗುತ್ತಿದೆ. ತನಿಖೆ ನಡೆಸಿ ಕ್ರಮ ಕೈಗೊಂಡಿರುವ ಸರ್ಕಾರದ ವಿರುದ್ಧವೇ ಬಿಜೆಪಿ ರಾಜಕೀಯ ಆರೋಪ ಮಾಡುತ್ತಿರುವುದು ಸರಿಯಲ್ಲ. ಈಗ ಅವರು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರ ಹಿಂದೆ ಬಿದ್ದಿದ್ದಾರೆ. ಕೆಪಿಎಸ್‌ಸಿ ವಿಚಾರದಲ್ಲಿ ಅವರನ್ನು ನೇಮಕ ಮಾಡಿದ್ದು ಯಾರು? ಈಗ ನಾನು ಈ ಬಗ್ಗೆ ಮಾತನಾಡುವುದಿಲ್ಲ. ತನಿಖೆ ನಡೆಯಲಿ ಎಂದರು.

ವಿದೇಶಗಳಲ್ಲಿ ವ್ಯವಹಾರ ತಪ್ಪೇ?

ಮೆದಾರರು ಭಾರತವನ್ನೆ ತೊರೆದಿದ್ದಾರೆ. ಇಂತಹ ಬೆಳವಣಿಗೆ ದೇಶದ ಆರ್ಥಿಕ ಪರಿಸ್ಥಿತಿಗೂ ತೊಂದರೆಯುಂಟು ಮಾಡುತ್ತದೆ ಎಂದು ಡಿ.ಕೆ.ಶಿವಕುಮಾರ್ ಟೀಕಿಸಿದರು.

ಎಂಇಎಸ್ ಅಧ್ಯಕ್ಷರಾಗಿ ಡಾ.ಎಸ್.ಮುರಳಿ ಆಯ್ಕೆ

ಮಂಡ್ಯ: ನಗರದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆ ಎಂಇಎಸ್ ಶಾಲೆ ಸರ್ವಸದಸ್ಯರ ಸಭೆ ಬುಧವಾರ ನಡೆಯಿತು. ಮುಂದಿನ ಅವಧಿಗೆ ಶಾಲಾ ಆಡಳಿತ ಮಂಡಳಿ ಆಯ್ಕೆ ನಡೆಯಿತು. ಎಂಐಟಿಯ ಡಾ.ಎಸ್. ಮುರಳಿ ಎಂಇಎಸ್ ಅಧ್ಯಕ್ಷರಾಗಿ ಸರ್ವ ಸಮ್ಮತವಾಗಿ ಆಯ್ಕೆಯಾದರು. ಉಪಾಧ್ಯಕ್ಷರಾಗಿ ಉದ್ಯಮಿ ಸುದರ್ಶನ್ ಬಾಬು ಮತ್ತು ಶಿಕ್ಷಣತಜ್ಞ ರಾಜೇಶ್, ಕಾರ್ಯದರ್ಶಿ ಡಾ.ಧರಣೇಂದ್ರಯ್ಯ ಆಯ್ಕೆಯಾದರು.

ಮುಗಿಯದ ರಸ್ತೆ ಕಾಮಗಾರಿ: ನಿವಾಸಿಗಳಿಗೆ ತೀವ್ರ ಸಮಸ್ಯೆ

ಮೈಸೂರು: ನಗರದ ಹೂಟಗಳ್ಳಿ ಕೆ.ಎಚ್.ಬಿ ಕಾಲೋನಿಯ ಮುಖ್ಯ ರಸ್ತೆಗೆ ಡಾಂಬರು ಹಾಕುವ ಕಾರ್ಯ ಕಳೆದ ಸುಮಾರು ಒಂದು ತಿಂಗಳಾದರೂ ಮುಗಿಯುತ್ತಿಲ್ಲ. ಕಾಲೋನಿಯ ಕೆಲವು ರಸ್ತೆಗಳನ್ನು ಜೆಸಿಬಿ ಯಂತ್ರದಿಂದ ಅಗೆದು ಹಾಕಿ ಒಂದು ತಿಂಗಳಾದರೂ ಡಾಂಬರು ಹಾಕಿಲ್ಲ. ಇದರಿಂದ ಇಲ್ಲಿನ ನಾಗರಿಕರು ಹಾಗೂ ವಾಹನ ಸಂಚಾರರಿಗೆ ತೀವ್ರ ತೊಂದರೆ ಉಂಟಾಗಿದೆ. ಹೂಟಗಳ್ಳಿ ನಗರಸಭೆಯಿಂದ ಕಾಮಗಾರಿ ನಡೆಯುತ್ತಿದೆ. ರಸ್ತೆ ಅಗೆಯುವಾಗ ಕುಡಿಯುವ ನೀರಿನ ಪೈಪ್ ಒಡೆದಿದೆ. ಪೈಪ್ ಒಡೆದು 3 ದಿನ ಕಳೆದರೂ ಸರಿಪಡಿಸುತ್ತಿಲ್ಲ. ನೀರು ರಸ್ತೆಯಲ್ಲಿ ಹರಿದು ಪೋಲಾಗುತ್ತಿದ್ದರೂ ನೀರು ನಿಲ್ಲಿಸುವ ಕೆಲಸ ಮಾಡುತ್ತಿಲ್ಲ ಎಂದು ನಿವಾಸಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕೆರೆಗಳಿಗೆ ನೀರು ತುಂಬಿಸಲು ಆಗ್ರಹ

ಗುಂಡ್ಲುಪೇಟೆಯಲ್ಲಿ ರೈತರ ಬೃಹತ್ ಪ್ರತಿಭಟನೆ । ಸರ್ಕಾರದ ವಿರುದ್ಧ ಆಕ್ರೋಶ

ಗುಂಡ್ಲುಪೇಟೆ: ತಾಲೂಕಿನ ತೆರಕಣಾಂಬಿ ಗ್ರಾಮದಲ್ಲಿ ತೆಂಗಿನಕೆರೆ, ಒಡೆಯನಕೆರೆ, ಶ್ಯಾನಡ್ರಹಳ್ಳಿ ಕೆರೆ, ಬಲಚಲವಾಡಿ ಕೆರೆ, ಬೆರಟಹಳ್ಳಿ ಕೆರೆ ಹಾಗೂ ನರಸಮಂಗಲ ಕೆರೆಗಳಿಗೆ ನೀರು ತುಂಬಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ನೇತೃತ್ವದಲ್ಲಿ ನೂರಾರು ರೈತರು ಬೃಹತ್ ಪ್ರತಿಭಟನೆ ನಡೆಸಿದರು.

ನೀರಿನ ವಿಚಾರದಲ್ಲಿ ರಾಜಕೀಯ ಮಾಡದಿರಲು ಆಗ್ರಹ

ಪ್ರತಿಭಟನೆಯಲ್ಲಿ ಮಾತನಾಡಿದ ಹಳ್ಳಿಕೆರೆಹುಂಡಿ ಭಾಗ್ಯರಾಜ್, ನೀರಿನ ವಿಚಾರದಲ್ಲಿ ರಾಜಕೀಯ ಮಾಡಬಾರದು. ತೀವ್ರ ಬರದಿಂದ ನಲುಗಿರುವ ರೈತರಿಗೆ ಕೆರೆಗಳಿಗೆ ನೀರು ಹರಿಸದಿರುವುದು ಗಾಯದ ಮೇಲೆ ಬರೆ ಎಳೆದಂತಾಗಿದೆ. ಅಧಿಕಾರಿಗಳು ಕೆರೆಗಳಿಗೆ ನೀರು ಹರಿಸುವ ಯೋಜನೆಯನ್ನು ಸಮರ್ಪಕವಾಗಿ ನಿರ್ವಹಿಸಬೇಕು ಹಾಗೂ ರಾಜಕೀಯ ಒತ್ತಡಕ್ಕೆ ಮಣಿದು ಕಾರ್ಯನಿರ್ವಹಿಸಬಾರದು ಎಂದು ಆಗ್ರಹಿಸಿದರು. ಜನಪ್ರತಿನಿಧಿಗಳು, ಸಚಿವರು ಹಾಗೂ ಮುಖ್ಯಮಂತ್ರಿಗಳ ಕಚೇರಿಗಳಿಗೆ ನಿರಂತರವಾಗಿ ನೀರು ಪೂರೈಕೆ ಮಾಡಲಾಗುತ್ತದೆ. ಆದರೆ ದೇಶಕ್ಕೆ ಅನ್ನ ನೀಡುವ ರೈತರ ಕೃಷಿಗೆ ನೀರು ಒದಗಿಸುವ ವಿಚಾರದಲ್ಲಿ ಮಾತ್ರ ಸರ್ಕಾರಗಳು ಹಿಂದೇಟು ಹಾಕುತ್ತಿವೆ ಎಂದು ಅವರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಸ್ವಯಂಪ್ರೇರಿತವಾಗಿ ನೀರು ಹರಿಸಿಕೊಳ್ಳುವ ಎಚ್ಚರಿಕೆ

ತಕ್ಷಣವೇ ಕೆರೆಗಳಿಗೆ ನೀರು ಹರಿಸದಿದ್ದರೆ ರೈತರು ಸ್ವಯಂ ಪ್ರೇರಿತರಾಗಿ ನೀರು ಹರಿಸಿಕೊಳ್ಳುವ ಮೂಲಕ ಜಾನುವಾರುಗಳಿಗೆ ಕುಡಿಯುವ ನೀರು ಹಾಗೂ ಅಂತರ್ಜಲ ವೃದ್ಧಿಗೆ ಮುಂದಾಗಲಿದ್ದಾರೆ. ಇದಕ್ಕೆ ಅಧಿಕಾರಿಗಳು ಅಡ್ಡಿಪಡಿಸಿದರೆ ಹೋರಾಟದ ಮೂಲಕ ಉತ್ತರ ನೀಡಲಾಗುವುದು ಎಂದು ಅವರು ಎಚ್ಚರಿಸಿದರು. ಅಲ್ಲದೆ, ಕೆರೆಗಳಿಗೆ ನೀರು ಹರಿಸಿಕೊಳ್ಳುವ ರೈತರ ವಿರುದ್ಧ ಕ್ರಮ ಕೈಗೊಳ್ಳುವುದಾದರೆ ಎಲ್ಲಾ ರೈತರನ್ನೂ ಜೈಲಿಗೆ ಹಾಕಿ, ಬಳಿಕ ಕೆರೆಗಳಿಗೆ ನೀರು ಹರಿಸುವಂತೆ ಸರ್ಕಾರವನ್ನು ಒತ್ತಾಯಿಸಲಾಗುವುದು ಎಂದು ಭಾಗ್ಯರಾಜ್ ಸವಾಲು ಹಾಕಿದರು.

ಈ ಬೃಹತ್ ಪ್ರತಿಭಟನೆಯಲ್ಲಿ ಸಂಘದ ಜಿಲ್ಲಾಧ್ಯಕ್ಷ ಹಾಲಿನ ನಾಗರಾಜ್, ಕೆರೆಹುಂಡಿ ರಾಜಣ್ಣ, ಪ್ರಕಾಶ್ ಗಾಂಧಿ, ತೆರೆಕಣಾಂಬಿ ಶಶಿ, ಒಳಗೆರೆ ಗಣೇಶ್, ಮಲಿಯೂರು ಮಹೇಂದ್ರ, ಅಂಗಡಿ ಸತೀಶ್, ಅರಳಿಕಟ್ಟೆ ಪ್ರಭಣ್ಣ, ಶ್ಯಾನಡ್ರಹಳ್ಳಿ ಮಲ್ಲು, ಬಸವರಾಜ್, ಮುಕಡಹಳ್ಳಿ ರಾಜು, ನರಸಮಂಗಲ ನಾಗು, ರಾಮಣ್ಣ, ಹೊನ್ನೇಗೌಡಹಳ್ಳಿ ಮಹೇಶ್, ಶ್ರೀಕಂಠ, ವೆಂಕಟರಾಮು ಸೇರಿದಂತೆ ತೆರೆಕಣಾಂಬಿಹುಂಡಿ, ಶ್ಯಾನಡ್ರಹಳ್ಳಿ, ಬಲಚವಾಡಿ, ಬರಟಹಳ್ಳಿ ಹಾಗೂ ನರಸಮಂಗಲ ಗ್ರಾಮದ ನೂರಾರು ರೈತರು ಭಾಗವಹಿಸಿದ್ದರು.

30ಟನ್ ಹಸಿ ಮೇವು ವಿತರಣೆ

ಗುಂಡ್ಲುಪೇಟೆ: ತಾಲೂಕಿನ ಸಂಗೇಗೌಡನಹುಂಡಿ ಮತ್ತು ಹಳೆಹುಂಡಿ ಗ್ರಾಮಗಳಲ್ಲಿ ಜಾನುವಾರುಗಳ ಮೇವಿನ ಕೊರತೆ ನೀಗಿಸುವ ನಿಟ್ಟಿನಲ್ಲಿ ಮಾದರಿ ಗುಂಡ್ಲುಪೇಟೆ ಅಭಿಯಾನದ ರೂವಾರಿ ಡಾ. ಬಿ.ಎಸ್. ಅಜಯ್ ಕುಮಾರ್ ನೇತೃತ್ವದಲ್ಲಿ 30 ಟನ್ ಹಸಿ ಮೇವು ವಿತರಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಮಾದರಿ ಗ್ರಾಮದ ಸಂಯೋಜಕ ಮಹದೇವ್, ಕಳೆದ ತಿಂಗಳು ಗುಂಡ್ಲುಪೇಟೆ ತಾಲೂಕನ್ನು ಬರಪೀಡಿತ ಪ್ರದೇಶವೆಂದು ಘೋಷಿಸುವಂತೆ ಒತ್ತಾಯಿಸಿ ಮಾದರಿ ಗುಂಡ್ಲುಪೇಟೆ ಅಭಿಯಾನದ ನೇತೃತ್ವದಲ್ಲಿ ಸಾವಿರಾರು ಜನರೊಂದಿಗೆ ಜಾಥಾ ನಡೆಸಿ ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಲಾಗಿತ್ತು ಎಂದು ತಿಳಿಸಿದರು.

ಅದೇ ಸಂದರ್ಭದಲ್ಲಿ ಡಾ. ಬಿ.ಎಸ್. ಅಜಯ್ ಕುಮಾರ್ ಅವರು ಬೆಟ್ಟೇಗೌಡನಹುಂಡಿ ಗ್ರಾಮಕ್ಕೆ ಭೇಟಿ ನೀಡಿ ರೈತರ ಜಮೀನುಗಳನ್ನು ಪರಿಶೀಲಿಸಿ ಬರ ಪರಿಸ್ಥಿತಿಯ ಅವಲೋಕನ ನಡೆಸಿದ್ದರು. ಈ ವೇಳೆ ಜಾನುವಾರುಗಳಿಗೆ ಮೇವಿನ ಕೊರತೆ ತೀವ್ರವಾಗಿರುವುದನ್ನು ಮನಗಂಡು ಬೆಟ್ಟೇಗೌಡನ ಹುಂಡಿ ಹಾಗೂ ಯಡಹುಂಡಿ ಗ್ರಾಮಗಳಲ್ಲಿ ಹಸಿ ಮೇವು ವಿತರಿಸಿದ್ದರು.

ಇದೀಗ ಇತರ ಗ್ರಾಮಗಳ ರೈತರು ಹಾಗೂ ಗ್ರಾಮಸ್ಥರಿಂದಲೂ ಮೇವು ವಿತರಿಸುವಂತೆ ಮನವಿಗಳು ಬರುತ್ತಿರುವ ಹಿನ್ನೆಲೆಯಲ್ಲಿ, ರೈತರು ಮತ್ತು ಗ್ರಾಮಸ್ಥರ ಸಂಕಷ್ಟಕ್ಕೆ ಸ್ಪಂದಿಸುವ ಉದ್ದೇಶದಿಂದ ವಿವಿಧ ಗ್ರಾಮಗಳಲ್ಲಿ ಮೇವು ವಿತರಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಅದರಂತೆ ಸಂಗೇಗೌಡನ ಹುಂಡಿ ಮತ್ತು ಹಳೆಹುಂಡಿ ಗ್ರಾಮದ ಜಾನುವಾರುಗಳಿಗೆ 30 ಟನ್ ಹಸಿ ಮೇವು ವಿತರಿಸಲಾಗಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಗ್ರಾಮ ಸ್ಥರು ಹಾಗೂ ಮಾದರಿ ಗುಂಡ್ಲುಪೇಟೆ ಅಭಿಯಾನದ ಸ್ವಯಂಸೇವಕರು ಉಪಸ್ಥಿತರಿದ್ದರು.

ಗುಂಡ್ಲುಪೇಟೆ: ಚಿರತೆ ಪ್ರತ್ಯಕ್ಷ

ಗುಂಡ್ಲುಪೇಟೆ: ತಾಲೂಕಿನ ಬೊಮ್ಮಲಾಪುರ ಗ್ರಾಮದ ಜಮೀನಿನಲ್ಲಿ ಬುಧವಾರ ಬೆಳಗ್ಗೆ ಚಿರತೆ ಕಾಣಿಸಿಕೊಂಡಿದ್ದು, ರೈತರು ಹಾಗೂ ಗ್ರಾಮಸ್ಥರಲ್ಲಿ ಆತಂಕ ಮೂಡಿದೆ.

ಬೆಳಗ್ಗೆ ಸುಮಾರು 6 ಗಂಟೆ ವೇಳೆಯಲ್ಲಿ ಜಮೀನಿನ ಬಳಿ ಚಿರತೆ ಕಾಣಿಸಿಕೊಂಡಿದೆ. ಇದರಿಂದ ಜಮೀನುಗಳಿಗೆ ತೆರಳುವ ರೈತರು ಹಾಗೂ ಜಾನುವಾರುಗಳ ಸುರಕ್ಷತೆ ಬಗ್ಗೆ ಆತಂಕ ವ್ಯಕ್ತಪಡಿಸಿದ್ದಾರೆ. ಚಿರತೆಯ ಚಲನವಲನದ ಬ

ಶ್ರೀ ಡಿ. ಕೆ. ಶಿವಕುಮಾರ್
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಸಿದ್ದರಾಮಯ್ಯ
ಮಾನ್ಯ ನಿಕಟಪೂರ್ವ ಮುಖ್ಯಮಂತ್ರಿಗಳು

ಡಾ. ಜಿ. ಪರಮೇಶ್ವರ
ಮಾನ್ಯ ಉಪಮುಖ್ಯಮಂತ್ರಿಗಳು

ಶ್ರೀ ಡಿ. ಕೆ. ಶಿವಕುಮಾರ್
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ವಿಧಾನ ಸೌಧ
ಬೆಂಗಳೂರು - 560001

ನಮಸ್ಕಾರ

ಮುಖ್ಯಮಂತ್ರಿಯಾಗಿ ರಾಜ್ಯದ ಜನತೆಯ ಸೇವೆ ಮಾಡುವ ಅವಕಾಶ ನನಗೆ ದೊರೆತು ಇಂದಿಗೆ ನೂರು ದಿನಗಳು ಪೂರೈಸಿವೆ.

ಈ ನೂರು ದಿನಗಳು ಕೇವಲ ಒಂದು ಅವಧಿಯ ಲೆಕ್ಕವಲ್ಲ. ಕೋಟ್ಯಂತರ ಕನ್ನಡಿಗರ ಬದುಕಿನಲ್ಲಿ ಬದಲಾವಣೆ ತರಬೇಕೆಂಬ ಹೊಣೆಗಾರಿಕೆಯನ್ನು ಇನ್ನಷ್ಟು ಆಳವಾಗಿ, ಗಾಢವಾಗಿ ಅರಿಯುವ ನೂರು ದಿನಗಳಾಗಿವೆ ಎಂದೇ ಭಾವಿಸುತ್ತೇನೆ.

ಜನರ ನಂಬಿಕೆ ಮತ್ತು ವಿಶ್ವಾಸದ ಮುಂದೆ ಅಧಿಕಾರ ಚಿಕ್ಕದು. ಜನರ ನಿರೀಕ್ಷೆಗಳ ಮುಂದೆ ಹುದ್ದೆ ಚಿಕ್ಕದು. ನಮ್ಮ ಮುಂದೆ ಇರುವ ಸವಾಲು, ಜವಾಬ್ದಾರಿ, ಹೊಣೆಗಾರಿಕೆ ಮಾತ್ರ ದೊಡ್ಡದು.

ಶ್ರೀ ಸಿದ್ದರಾಮಯ್ಯನವರು ನಮ್ಮ ನಾಡಿಗೆ ಸಾಮಾಜಿಕ ನ್ಯಾಯದ ಗಟ್ಟಿಯಾದ ಅಡಿಪಾಯ ಹಾಕಿಕೊಟ್ಟಿದ್ದಾರೆ. ಸರ್ಕಾರ ಎಂದರೆ ಎಲ್ಲರಿಗಾಗಿ ಇರಬೇಕು, ಅದರಲ್ಲೂ ಶೋಷಿತರ, ದಮನಿತರ ಪರವಾಗಿ ಗಟ್ಟಿಯಾಗಿ ನಿಲ್ಲಬೇಕು ಎನ್ನುವುದನ್ನು ಅವರು ತಮ್ಮ ಆಡಳಿತದ ಮೂಲಕ ಸಾಧಿಸಿ ತೋರಿಸಿದ್ದಾರೆ. ಇದೇ ಬದ್ಧತೆ ಮತ್ತು ಕಾಳಜಿಯನ್ನು ನಾನೂ ಮುಂದುವರೆಸುತ್ತಿದ್ದೇನೆ.

ನಮ್ಮ ಐದು ಗ್ಯಾರಂಟಿಗಳು ರಾಜ್ಯದ ಲಕ್ಷಾಂತರ ಕುಟುಂಬಗಳಿಗೆ ಆರ್ಥಿಕ ಚೈತನ್ಯ, ಬದುಕಿಗೆ ನೆಮ್ಮದಿ ಮತ್ತು ಭದ್ರತೆಯನ್ನು ನೀಡಿವೆ.

ಆದರೆ ಸರ್ಕಾರದ ಹೊಣೆಗಾರಿಕೆ ಇಷ್ಟಕ್ಕೇ ಮುಗಿಯುವುದಿಲ್ಲ. ಜನರಿಗೆ ಇಂದು ಏನು ಸಿಕ್ಕಿದೆ ಎನ್ನುವುದಕ್ಕಿಂತ, ನಾಳೆ ಅವರಿಗೆ ಇನ್ನೇನು ಬೇಕು ಎಂಬುದನ್ನು ಅರಿತು ಕೆಲಸ ಮಾಡುವುದು ನಮ್ಮ ದೃಷ್ಟಿಕೋನ ಮತ್ತು ಗುರಿಯಾಗಿದೆ.

ಈ ಮೊದಲ ನೂರು ದಿನಗಳಲ್ಲಿ ಆ ದಿಕ್ಕಿನಲ್ಲಿ ನಾವು ಹಲವು ಗಟ್ಟಿ ಹೆಜ್ಜೆಗಳನ್ನು ಇಟ್ಟಿದ್ದೇವೆ. **ವೃತ್ತಿಪರ ಕೋರ್ಸ್‌ಗಳ ಪ್ರವೇಶದಲ್ಲಿ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ 7.5% ಮೀಸಲಾತಿ, ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್‌ಗಳು, ₹29,679 ಕೋಟಿ ಮೊತ್ತದ ಹೂಡಿಕೆಗಳಿಗೆ ಅನುಮೋದನೆ ದೊರೆತಿದ್ದು, ಇದರಿಂದ ಸುಮಾರು 66,000 ಉದ್ಯೋಗಗಳು ಸೃಷ್ಟಿಯಾಗುವ ನಿರೀಕ್ಷೆ, ಯುವಜನರಲ್ಲಿ ಕ್ರೀಡೆ, ಸಂಸ್ಕೃತಿ ಮತ್ತು ವೈಜ್ಞಾನಿಕ ಮನೋಭಾವ ಬೆಳೆಸಲು 10,000 ಭಾರತ್ ಜೋಡೋ ಯುವ ಸಂಘಗಳು, ಭಾರತದ ಮೊದಲ ಸರ್ಕಾರಿ ಪ್ರಾಯೋಜಿತ AI ವಿಶ್ವವಿದ್ಯಾಲಯ, 6ನೇ ತರಗತಿಯಿಂದಲೇ AI ಶಿಕ್ಷಣ, ಮೋಡ ಬಿತ್ತನೆ (Cloud Seeding), ಅತ್ಯಂತ ಹಿಂದುಳಿದ 10 ಜಿಲ್ಲೆಗಳಲ್ಲಿ 1 ಲಕ್ಷ ಹೊಸ ಉದ್ಯೋಗಗಳನ್ನು ಸೃಷ್ಟಿಸುವ ಯೋಜನೆ, ಖಾಲಿ ಇರುವ 72,000 ಸರ್ಕಾರಿ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆಗೆ ಚಾಲನೆ ನೀಡಿರುವುದು ಹಾಗೂ ಜನರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸಲು ನನ್ನ ನೇರ ಮೇಲ್ವಿಚಾರಣೆಯಲ್ಲಿ 'ಪ್ರಜಾ ಸೇವೆ' ಇಲಾಖೆಯ ಸ್ಥಾಪನೆಯಾಗಿದೆ.**

ಇವೆಲ್ಲ ಯೋಜನೆಗಳಿಗೂ ಬಹಳ ಬದ್ಧತೆಯಿಂದ ಈ ನೂರು ದಿನಗಳಲ್ಲಿ ಚಾಲನೆ ನೀಡಲು ನಮಗೆ ಸಾಧ್ಯವಾಗಿದೆ. ಇವನ್ನೆಲ್ಲಾ ನಾನು ಸಾಧನೆಗಳ ಪಟ್ಟಿ ಎಂದು ಹೇಳುತ್ತಿಲ್ಲ. ಇವೆಲ್ಲವೂ ಮುಂದೆ ಸಾಗಬೇಕಾಗಿರುವ ಹಾದಿಗೆ ದಿಕ್ಸೂಚಿಗಳಾಗಿವೆ.

ಜನತೆಯ ನಿರೀಕ್ಷೆಗಳು ದೊಡ್ಡವು ಎಂಬುದು ನನಗೆ ಗೊತ್ತಿದೆ.

ಅವು ದೊಡ್ಡದಾಗಿಯೇ ಇರಬೇಕು. ನಮ್ಮ ಸರ್ಕಾರ ಜನತೆಯ ಧ್ವನಿಯನ್ನು, ಜನರ ಕೂಗನ್ನು ವಿನಮ್ರತೆಯಿಂದ ಕೇಳಿಸಿಕೊಳ್ಳುತ್ತದೆ. ಜನತೆಯ ಸಾಮೂಹಿಕ ಬೇಡಿಕೆ ಮತ್ತು ಸಲಹೆಗಳನ್ನು ಸದಾ ಮುಕ್ತವಾಗಿ ಸ್ವೀಕರಿಸುತ್ತದೆ ಮತ್ತು ಪೂರಕವಾಗಿ ವರ್ತಿಸುತ್ತದೆ, ಜನತೆಗೆ ಇಷ್ಟವಿಲ್ಲದ್ದನ್ನು ಮುಲಾಜಿಲ್ಲದೆ ಹಿಂದಕ್ಕೆ ಪಡೆಯುತ್ತದೆ ಎನ್ನುವುದನ್ನು ನಮ್ಮ ಸರ್ಕಾರ ಸಾಬೀತು ಮಾಡಿದೆ.

ದೃಢ ಕರ್ನಾಟಕ ನನ್ನ ಸಂಕಲ್ಪ. ಸಾಮಾಜಿಕವಾಗಿ, ಆರ್ಥಿಕವಾಗಿ, ಆಧುನಿಕವಾಗಿ ದೃಢವಾದ ಮಾದರಿ ಹೆಜ್ಜೆಗಳನ್ನು ನಾವು ಇಡುತ್ತೇವೆ.

ನನ್ನ ಸರ್ಕಾರದ ಎದುರಿಗೆ ದೊಡ್ಡ ಸವಾಲುಗಳಿವೆ. ನಮ್ಮ ಅನ್ನದಾತರು "ಬರ"ಕ್ಕೆ ಸಿಲುಕಿದ್ದಾರೆ. ಈ ನೂರು ದಿನಗಳ ನಮ್ಮ ನಡೆ ಮುಂದಿನ 500 ದಿನಗಳಲ್ಲಿ ಸಾಗಬೇಕಾದ ಹಾದಿಗೆ ದಿಕ್ಸೂಚಿಯಾಗಿದೆ ಎನ್ನುವುದನ್ನು ಮತ್ತೊಮ್ಮೆ ಹೇಳುತ್ತೇನೆ. ಕರ್ನಾಟಕ ಅವಕಾಶಗಳಿಗಾಗಿ ಕಾಯುವುದಿಲ್ಲ. **ಅವಕಾಶಗಳನ್ನು ಸೃಷ್ಟಿಸುತ್ತದೆ**

ಆದರೆ, ನಮ್ಮ ನಾಡಿಗೆ ಪ್ರಗತಿ, ಕಲ್ಯಾಣ ಮತ್ತು ಅಭಿವೃದ್ಧಿಯ ಅದ್ಭುತ ಚರಿತ್ರೆ ಇದೆ. ಎಂಥಾದ್ದೇ ಸವಾಲುಗಳನ್ನು ದಿಟ್ಟತನದಿಂದ ಎದುರಿಸಿ, ಪರಿಹರಿಸುವ **ಚೈತನ್ಯವನ್ನು ನಾನು ನಮ್ಮ ನಾಡಿನ ಚರಿತ್ರೆಯಿಂದ ಒದಗಿಸಿಕೊಳ್ಳುತ್ತೇನೆ.** ಇದೇ ನನ್ನ ಮಣ್ಣಿನ ಗುಣ.

ಈ ಬಲವಾದ ನಂಬಿಕೆ ಮತ್ತು ವಿಶ್ವಾಸದಿಂದ **ನಮ್ಮ ಸಂಪುಟದ ಪೂರ್ಣ ಸಹಕಾರದೊಂದಿಗೆ ಸವಾಲನ್ನು ಗೆದ್ದು, ಸಾಧಿಸುತ್ತೇವೆ. ನನ್ನ ಉಸಿರಿರುವವರೆಗೂ ಈ ಮಣ್ಣಿನ ಋಣವನ್ನು ತೀರಿಸಲು, ನನ್ನ ಜನರ ಬದುಕನ್ನು ಸುಧಾರಿಸಲು ಶ್ರಮಿಸುತ್ತೇನೆ ಎನ್ನುವ ಸಂಕಲ್ಪ ಹೊಂದಿದ್ದೇನೆ.**

ಸದಾ ನಿಮ್ಮ ಸೇವೆಯಲ್ಲಿ,

ಡಿ. ಕೆ. ಶಿವಕುಮಾರ್
ಪ್ರಜಾಸೇವಕ

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಹಾಗೂ ಬ್ರಾಹ್ಮಣ ಸಮುದಾಯದ ಪತ್ರಿಕೆಗಳಿಗೆ ಪ್ರೋತ್ಸಾಹ ರೂಪದ ಜಾಹೀರಾತು

ವಿದ್ಯಾರ್ಥಿಗಳ ಗ್ರಹಿಕಾಶಕ್ತಿಯನ್ನು ಆಲಿಸಿ, ಪಾಠ ಮಾಡಿ

ಚಾಮರಾಜನಗರ, ವಿದ್ಯಾರ್ಥಿಗಳ ಕಲಿಕಾ ಮತ್ತು ಅವರು ಗ್ರಹಿಸುವ ಶಕ್ತಿಯನ್ನು ಮನಗಂಡು ಶಿಕ್ಷಕರು ಪಾಠ ಪ್ರವಚನ ಮಾಡುವ ಮೂಲಕ ಭವ್ಯ ಭಾರತ ಸತ್ಪ್ರಜೆಗಳನ್ನು ರೂಪಿಸುವ ಜವಾಬ್ದಾರಿ ನಿಮ್ಮದಾಗಿದೆ ಎಂದು ನಿವೃತ್ತ ಶಿಕ್ಷಕ ಶ್ರೀಕಂಠಸ್ವಾಮಿ ತಿಳಿಸಿದರು.

ತಾಲೂಕಿನ ಅಂಕನಶೆಟ್ಟಿಪುರದಲ್ಲಿರುವ ಶ್ರೀ ಪ್ರೇರಣಾ ವಿದ್ಯಾಸಂಸ್ಥೆಯಲ್ಲಿ ನಡೆದ ಶಿಕ್ಷಕರ ದಿನಾಚರಣೆ ಹಾಗೂ ಶ್ರೀಕೃಷ್ಣ ಜನ್ಮಾಷ್ಟಮಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಹಿಂದಿನ ಶಿಕ್ಷಣ ಪದ್ಧತಿಗೂ ಇತ್ತೀಚಿನ ಶಿಕ್ಷಣ ಪದ್ಧತಿಗೂ ಬಹಳ ವ್ಯತ್ಯಾಸವಾಗಿದೆ. ಶಿಕ್ಷಕರು ಮೌಲ್ಯವನ್ನು ಉಳಿಸಿಕೊಂಡು ವಿದ್ಯಾರ್ಥಿಗಳಿಗೆ ಪ್ರೀತಿ ಪಾತ್ರರಾಗಿ ಭೋದನೆ ಮಾಡಬೇಕಾಗಿದೆ. ಮಕ್ಕಳಲ್ಲಿ ಕಲಿಯುವ ಆಸಕ್ತಿಯನ್ನು ಮೂಡಿಸಲು ಶಿಕ್ಷಕರು ಮುಂದಾಗಬೇಕು ಎಂದು ಸಲಹೆ ನೀಡಿದರು.

ಪ್ರೇರಣಾ ಟ್ರಸ್ಟ್ ಅಧ್ಯಕ್ಷ ಬಿ.ಪಿ. ಪ್ರಕಾಶ್ ಮಾತನಾಡಿ, ಅಕ್ಷರ ಹೇಳಿಕೊಟ್ಟ ಗುರುಗಳು ಸರ್ವ ಶ್ರೇಷ್ಠರು, ತಂದೆ, ತಾಯಿ ನಂತರ ಸ್ಥಾನವನ್ನು ಗುರುವಿಗೆ ನೀಡಲಾಗುತ್ತದೆ. ವಿದ್ಯಾರ್ಥಿಗಳು ಮುಂದೆ ಗುರಿ ಇಟ್ಟು ಹಿಂದೆ ಗುರುವಿನ ಮಾರ್ಗದರ್ಶನದಲ್ಲಿ ಮುನ್ನಡೆಬೇಕು ಎಂದರು.

ಶ್ರೀಕೃಷ್ಣ ಜನ್ಮಾಷ್ಟಮಿಯನ್ನು ಆಚರಣೆ ಮಾಡುವ ಜೊತೆಗೆ ಶ್ರೀಕೃಷ್ಣ ಹಾಗೂ ಮಹಾಭಾರತದಲ್ಲಿ ಬರುವ ಸನ್ನಿವೇಶಗಳು ಸಹ ನಮ್ಮ ಜೀವನಕ್ಕೆ ದಾರಿದೀಪವಾಗಿದೆ. ಶ್ರೀಕೃಷ್ಣ ಉಪದೇಶವು ಜಗತ್ತಿಗೆ ದಿವ್ಯಶಕ್ತಿಯಾಗಿದೆ. ಶಾಲೆ ನಡೆದು ಬಂದ ಹಾದಿ, ಶಿಕ್ಷಕರ ಪಾತ್ರ ಮತ್ತು ಮಹತ್ವದ ಬಗ್ಗೆ ಮಾತನಾಡಿ, ಮುಂದಿನ ದಿನಗಳಲ್ಲಿ ಶಿಕ್ಷಕ ವೃಂದವರಿಗೆ ಒಳ್ಳೆಯದಾಗುತ್ತದೆ ಎಂದರು. ಕಾರ್ಯಕ್ರಮದಲ್ಲಿ ಶಾಲಾ ಮಕ್ಕಳಿಗೆ ಕೃಷ್ಣ ವೇಷಭೂಷಣ ಸ್ಪರ್ಧೆಯನ್ನು ಆಯೋಜನೆ ಮಾಡಲಾಗಿತ್ತು. ಶಾಲೆಯ ಮಕ್ಕಳು ಕೃಷ್ಣ, ರುಕ್ಮಿಣಿ, ರಾಧೆ ವೇಷ ಉಡುಗೆಯನ್ನು ಧರಿಸಿ, ಸಂಭ್ರಮಿಸಿದರು.

ವೇದಿಕೆಯಲ್ಲಿ ಟ್ರಸ್ಟ್‌ನ ನಟರಾಜ್,ಶಾಲೆಯ ಮುಖ್ಯ ಶಿಕ್ಷಕ ಎಚ್.ಜಿ. ಮಹೇಶ್‌ಕುಮಾರ್, ತೀರ್ಪುಗಾರರಾಗಿ ಮಹದೇವಪ್ರಸಾದ್, ಕಾವ್ಯ, ಸಹ ಶಿಕ್ಷಕರು, ಪೋಷಕರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಆದ್ಯತೆ

ಗುಂಡ್ಲುಪೇಟೆ: ಸರ್ಕಾರಿ ಶಾಲೆಗಳು ಉಳಿಯಬೇಕು, ಬೆಳೆಯಬೇಕು ಎಂಬ ಉದ್ದೇಶದಿಂದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡುವ ಕಾರ್ಯಕ್ರಮಗಳನ್ನು ಆಯೋಜಿಸುತ್ತಿರುವುದು ಸಂತಸದ ವಿಚಾರ ಎಂದು ಶಾಸಕ ಎಚ್.ಎಂ. ಗಣೇಶಪ್ರಸಾದ್ ಹೇಳಿದರು.

ತಾಲೂಕಿನ ದೊಡ್ಡತುಪ್ಪೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಾಂಗ್ರೆಸ್ ಯುವ ಘಟಕ ಹಾಗೂ ಗಣೇಶಪ್ರಸಾದ್ ಅಭಿಮಾನಿ ಬಳಗದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶಾಲಾ ಮಕ್ಕಳಿಗೆ ಶಾಲಾ ಬ್ಯಾಗ್, ತಟ್ಟೆ-ಲೋಟ ಹಾಗೂ ನೋಟ್‌ಬುಕ್‌ಗಳನ್ನು ವಿತರಿಸಿ ಅವರು ಮಾತನಾಡಿದರು.ವಿದ್ಯಾರ್ಥಿಗಳಲ್ಲಿ ಶಿಕ್ಷಣದ ಬಗ್ಗೆ ಆಸಕ್ತಿ ಮೂಡಿಸಲು ಹಾಗೂ ಅವರಿಗೆ ಅಗತ್ಯ ಪ್ರೋತ್ಸಾಹ ನೀಡಲು ಇಂತಹ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಳ್ಳಬೇಕು. ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಮುಂದಿನ ದಿನಗಳಲ್ಲಿಯೂ ಅಗತ್ಯ ಸಹಕಾರ ನೀಡುವುದಾಗಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಎಪಿಎಂಸಿ ಅಧ್ಯಕ್ಷ ವಿರೂಪಾಕ್ಷ, ಲೋಕೇಶ್, ಗೌಡಕೆ ಮಹದೇವಪ್ಪ, ದೊರೆಸ್ವಾಮಿ, ಪಾಪಣ್ಣ, ಗುರು, ಶಾಲೆಯ ಮುಖ್ಯ ಶಿಕ್ಷಕ ಗಣೇಶ್, ಸಹ ಶಿಕ್ಷಕಿ ಆರ್. ಮಹಾದೇವಿ, ಅತಿಥಿ ಶಿಕ್ಷಕ ಪ್ರದೀಪ್ ಕುಮಾರ್ ಎಂ. ಸೇರಿದಂತೆ ಕಾಂಗ್ರೆಸ್ ಯುವ ಮುಖಂಡರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.



ಕೃಷ್ಣ ವಂದನ

ಸ್ನೇಹಾ ಆನಂದ್

ಹೇ ಕೃಷ್ಣಾ!

ಗೋಕುಲ ದ್ವಾರಕೆ ಬಂದನು ಗುಮ್ಮಾ ,
ಹೊದಿಸಿ ಬಿಡು ನಿನ್ನ ಸೀರೆಯ ಸೆರಗಮ್ಮಾ ,
ದನ ಕರುಗಳನು ಕಟ್ಟಲು ಹೇಳಮ್ಮಾ ,
ಹೊದ್ದು ಮಲಗುವೇ ನಾ ಸುಮ್ಮನೆ ಅಮ್ಮಾ||

ಸದ್ದು ಮಾಡದೆ ನಾ ಮನೆಯೊಳಗಿರುವೆ,
ಕದ್ದು ನೋಡು ಕೊಂಚ ಗುಮ್ಮನ ಅಮ್ಮಾ ,
ಖುದ್ದಾಗಿ ಬರಲು ನೀನೇ ಹೇಳಿದೆಯೇನು,
ನಿನ್ನ ಕಂದನ ನೀನು ಬಿಟ್ಟಿರುವೆ ಏನು||

ನಿನ್ನ ಮಗನ ರೂಪ ಕಂಡಿಲ್ಲವೇನು,
ನೀನೇ ನನ್ನಮ್ಮನೆಂದು ಮುದ್ದಿಸಿಲ್ಲವೇನು,
ಕಿರುಬೆರಳಿನಲಿ ಗಿರಿಯನೆತ್ತಿದ
ನಾನು,ಹೇಮಗಿರೀಶನೆಂದು ಹೆಸರಿಲ್ಲವೇನು|

ಹೊಸ ಕಲ್ಪನೆ ರೂಪಿಸಿ

ದಸರಾ ದೀಪಾಲಂಕಾರ । ರಮೇಶ್ ಬಂಡಿಸಿದ್ದೇಗೌಡ

ಮುಖ್ಯಮಂತ್ರಿಗಳ ನಿರೀಕ್ಷೆ ಹಾಗೂ ಹೊಸತನದ ಆಲೋಚನೆ

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಪರಿಕಲ್ಪನೆ ಹಾಗೂ ನಿರೀಕ್ಷೆಗಳಿಗೆ ತಕ್ಕಂತೆ ದೀಪಾಲಂಕಾರ ಮಾಡಬೇಕಿದೆ. ಇದಕ್ಕಾಗಿ ಪ್ರತಿಯೊಬ್ಬರು ತಮ್ಮಲ್ಲಿರುವ ಹೊಸ ಆಲೋಚನೆಗಳನ್ನು ಪರಸ್ಪರ ಸಮಾಲೋಚಿಸಿ ಅವುಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕೆಲಸ ಮಾಡಬೇಕು ಎಂದು ಅವರು ಸೂಚಿಸಿದರು. ಈ ಹಿಂದಿನ ವರ್ಷಗಳಲ್ಲಿ ವಿದ್ಯುತ್ ದೀಪಾಲಂಕಾರ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದವರ ಸಲಹೆಗಳನ್ನು ಪಡೆದುಕೊಂಡು ಎಲ್ಲರೂ ಒಗ್ಗೂಡಿ ಕಾರ್ಯನಿರ್ವಹಿಸಬೇಕು. ಸೆಸ್ಕ್ ವತಿಯಿಂದ ಈ ಬಾರಿ ಹೊಸತನದ ದೀಪಾಲಂಕಾರವನ್ನು ಜನರು ನಿರೀಕ್ಷಿಸುತ್ತಿದ್ದು, ಅದಕ್ಕೆ ಪೂರಕವಾಗಿ ದೀಪಾಲಂಕಾರವನ್ನು ಮತ್ತಷ್ಟು ಆಕರ್ಷಕವಾಗಿ ರೂಪಿಸಬೇಕು ಎಂದು ಕರೆ ನೀಡಿದರು.

ಪರಿಸರ ಕಾಳಜಿ, ಸುರಕ್ಷತೆಗೆ ಆದ್ಯತೆ

ದೀಪಾಲಂಕಾರ ಅಳವಡಿಸುವ ವೇಳೆ ಮರಗಳಿಗೆ ಮೊಳೆ ಹೊಡೆಯದಂತೆ ತೀವ್ರ ಎಚ್ಚರಿಕೆ ವಹಿಸಬೇಕು. ಮರಗಳಿಗೆ ಹಾನಿಯಾಗದ ರೀತಿಯಲ್ಲಿ ವಿದ್ಯುತ್ ದೀಪಾಲಂಕಾರ ಮಾಡಬೇಕು ಹಾಗೂ ಮುಖ್ಯವಾಗಿ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಎಲ್ಲ ಕಾಮಗಾರಿಗಳಲ್ಲಿ ಉತ್ತಮ ಗುಣಮಟ್ಟ ಕಾಯ್ದುಕೊಂಡು ದಸರಾ ದೀಪಾಲಂಕಾರದ ಕಾರ್ಯವನ್ನು ಯಶಸ್ವಿಗೊಳಿಸಬೇಕು ಎಂದು ಅವರು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಮೈಸೂರು: ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ವಿದ್ಯುತ್ ದೀಪಾಲಂಕಾರಕ್ಕೆ ಈ ಬಾರಿ ಹೊಸ ಮೆರುಗು ನೀಡುವುದರ ಜತೆಗೆ ಆಕರ್ಷಕ ಪರಿಕಲ್ಪನೆಯಲ್ಲಿ ಮೂಡಿಬರಬೇಕು, ಈ ನಿಟ್ಟಿನಲ್ಲಿ ಸಿದ್ಧತೆ ಕೈಗೊಳ್ಳಬೇಕು ಎಂದು ಶಾಸಕ ಹಾಗೂ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಸೆಸ್ಕ್) ಅಧ್ಯಕ್ಷ ರಮೇಶ್ ಬಂಡಿಸಿದ್ದೇಗೌಡ ಅಧಿಕಾರಿಗಳಿಗೆ ಸೂಚಿಸಿದರು. ದಸರಾ ವಿದ್ಯುತ್ ದೀಪಾಲಂಕಾರದ ಸಿದ್ಧತೆಗಳ ಕುರಿತು ಬುಧವಾರ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಅವರು ಮಾತನಾಡಿದರು. ಕಳೆದ ವರ್ಷಕ್ಕಿಂತ ಈ ಬಾರಿ ನಮ್ಮ ಮೇಲಿನ ಜವಾಬ್ದಾರಿ ಹೆಚ್ಚಾಗಿದೆ. ಕಡಿಮೆ ಅವಧಿಯಲ್ಲಿ ಸಮರೋಪಾದಿಯಲ್ಲಿ ಸಿದ್ಧತೆ ಕೈಗೊಂಡು, ಕಳೆದ ಮೂರು ವರ್ಷಗಳಲ್ಲಿ ಕಾಣದಂತಹ ಹೊಸ ವಿನ್ಯಾಸ ಮತ್ತು ಪರಿಕಲ್ಪನೆಯ ದೀಪಾಲಂಕಾರ ಮಾಡಬೇಕು ಎಂದು ತಿಳಿಸಿದರು.

ಈ ಸಭೆಯಲ್ಲಿ ಸೆಸ್ಕ್ ಅಧೀಕ್ಷಕ ಇಂಜಿನಿಯರ್ ಸುನೀಲ್ ಕುಮಾರ್ ಅವರು ದಸರಾ ವಿದ್ಯುತ್ ದೀಪಾಲಂಕಾರಕ್ಕಾಗಿ ಈಗಾಗಲೇ ಕೈಗೊಂಡಿರುವ ಸಿದ್ಧತೆಗಳ ಕುರಿತು ಸಭೆಗೆ ಮಾಹಿತಿ ನೀಡಿದರು. ಜೊತೆಗೆ, ಸೆಸ್ಕ್ ತಾಂತ್ರಿಕ ನಿರ್ದೇಶಕ ಎಲ್. ಲೋಕೇಶ್ ಸೇರಿದಂತೆ ಇತರ ಅಧಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ರಸ್ತೆ, ಚರಂಡಿ ಕಾಮಗಾರಿಗೆ ಚಾಲನೆ

ಶಾಸಕ ಎಚ್.ಎಂ.ಗಣೇಶ್ ಪ್ರಸಾದ್‌ರಿಂದ ಭೂಮಿಪೂಜೆ

ಗುಂಡ್ಲುಪೇಟೆ: ತಾಲ್ಲೂಕಿನ ವಿವಿಧ ಗ್ರಾಮಗಳ ಪರಿಶಿಷ್ಟ ಪಂಗಡದ ಬಡಾವಣೆಗಳಲ್ಲಿ ಟಿಎಸ್‌ಪಿ ಯೋಜನೆಯಡಿ ಒಟ್ಟು 1.20 ಕೋಟಿ ವೆಚ್ಚದಲ್ಲಿ ಸಿಸಿ ರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿಗಳಿಗೆ ಶಾಸಕ ಎಚ್.ಎಂ. ಗಣೇಶಪ್ರಸಾದ್ ಗುದ್ದಲಿಪೂಜೆ ನೆರವೇರಿಸಿದರು

ತಾಲ್ಲೂಕಿನ ರಾಘವಾಪುರ ಗ್ರಾಮದಲ್ಲಿ 25 ಲಕ್ಷ, ಭೀಮನಬೀಡು ಗ್ರಾಮದಲ್ಲಿ 25 ಲಕ್ಷ, ಬೇರಂಬಾಡಿ ಗ್ರಾಮದಲ್ಲಿ 25 ಲಕ್ಷ, ಕನ್ನೇಗಾಲ ಗ್ರಾಮದಲ್ಲಿ 20 ಲಕ್ಷ ಹಾಗೂ ಹಂಗಳ ಗ್ರಾಮದಲ್ಲಿ 25 ಲಕ್ಷ ವೆಚ್ಚದಲ್ಲಿ ಪರಿಶಿಷ್ಟ ಪಂಗಡದವರ ಬೀದಿಗಳಲ್ಲಿ ಸುಸಜ್ಜಿತ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗಳಿಗೆ ಚಾಲನೆ ನೀಡಲಾಯಿತು. ಇದೇ ವೇಳೆ ಹುಂಡಿಪುರ ಗ್ರಾಮದಲ್ಲಿ ಕುಡಿಯುವ ನೀರಿನ ಓವರ್‌ಹೆಡ್ ಟ್ಯಾಂಕ್ ನಿರ್ಮಾಣ ಕಾಮಗಾರಿಗೂ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಗಣೇಶಪ್ರಸಾದ್, ತಾಲ್ಲೂಕಿನ ಹಲವು ಗ್ರಾಮಗಳಲ್ಲಿ ಟಿಎಸ್‌ಪಿ ಯೋಜನೆಯಡಿ ಪರಿಶಿಷ್ಟ ಪಂಗಡದ ಬಡಾವಣೆಗಳಿಗೆ ಅಗತ್ಯ ಮೂಲಸೌಕರ್ಯ ಕಲ್ಪಿಸಲಾಗುತ್ತಿದೆ. ಇನ್ನೂ ಹಲವು ಗ್ರಾಮಗಳಲ್ಲಿ ಸಿಸಿ ರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿಗಳಿಗೆ ಶೀಘ್ರದಲ್ಲೇ ಚಾಲನೆ ನೀಡಲಾಗುವುದು. ಸಾಮಾನ್ಯ ಸೇರಿದಂತೆ ಎಲ್ಲ ವರ್ಗಗಳ ಬಡಾವಣೆಗಳಲ್ಲಿಯೂ ರಸ್ತೆ ಅಭಿವೃದ್ಧಿಯ ಅಗತ್ಯವಿದ್ದು, ಮುಖ್ಯಮಂತ್ರಿ ವಿಶೇಷ ಅನುದಾನ, ಎಸ್‌ಸಿಪಿ ಹಾಗೂ ಟಿಎಸ್‌ಪಿ ಯೋಜನೆಗಳ ಮೂಲಕ ಹಂತ ಹಂತವಾಗಿ ಅಭಿವೃದ್ಧಿ ಕೈಗೊಳ್ಳಲಾಗುವುದು ಎಂದರು.

ಭೀಮನಬೀಡು ಗ್ರಾಮದಲ್ಲಿ ಈಗಾಗಲೇ 1 ಕೋಟಿಗೂ ಹೆಚ್ಚು ಅನುದಾನದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಇದೀಗ ಪರಿಶಿಷ್ಟ ಪಂಗಡದ ಬಡಾವಣೆಗಳಲ್ಲಿಯೂ ಸುಸಜ್ಜಿತ ರಸ್ತೆ ಮತ್ತು ಚರಂಡಿ ನಿರ್ಮಿಸಲಾಗುತ್ತಿದ್ದು, ಅಗತ್ಯವಿರುವ ಕಡೆ ಹೈಮಾಸ್ಟ್ ದೀಪಗಳನ್ನೂ ಅಳವಡಿಸಲಾಗುವುದು. ಗ್ರಾಮಸ್ಥರು ಕಾಮಗಾರಿಗಳಿಗೆ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಉಪ್ಪಾರ ಸಮುದಾಯ ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡದ ಮುಖಂಡರು ಸಮುದಾಯ ಭವನ ನಿರ್ಮಾಣಕ್ಕೆ ಮನವಿ ಸಲ್ಲಿಸಿದರು. ಮನವಿಗೆ ಸ್ಪಂದಿಸಿದ ಶಾಸಕ ಗಣೇಶಪ್ರಸಾದ್, ಮುಖ್ಯಮಂತ್ರಿ ವಿಶೇಷ ಅನುದಾನ ಬಿಡುಗಡೆಯಾದ ಬಳಿಕ ಸಮುದಾಯ ಭವನ ನಿರ್ಮಾಣಕ್ಕೆ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.ಚಾಮುಲ್ ನಿರ್ದೇಶಕ ಎಚ್.ಎಸ್. ನಂಜುಂಡಪ್ರಸಾದ್, ಮಾಜಿ ಕಾಡಾ ಅಧ್ಯಕ್ಷ ಎಚ್.ಎಸ್. ನಂಜಪ್ಪ, ಹಾಪ್‌ಕಾಮ್ಸ್ ಅಧ್ಯಕ್ಷ ನಾಗೇಶ್, ಎಪಿಎಂಸಿ ಅಧ್ಯಕ್ಷ ವಿರೂಪಾಕ್ಷ, ಗ್ರಾ.ಪಂ ಮಾಜಿ ಅಧ್ಯಕ್ಷ ಗೋವಿಂದರಾಜು, ಉಲ್ಲಾಸ್, ತಮ್ಮಯ್ಯಪ್ಪ,., ಸ್ವಾಮಿ, ರಾಜೇಶ್ ಬೇರಂಬಾಡಿ, ಎಸ್ ಅರ್ ರಾಜಶೇಖರ್ ಎಪಿಎಂಸಿ ಸದಸ್ಯ ಅರಸುಶೆಟ್ಟಿ , ಜಿ. ಸ್ವಾಮಿ, ಮಹೇಶ್, ಚಂದ್ರು, ಮಲ್ಲಿಕಾರ್ಜುನ, ಮಣಿ, ಗೋಪಾಲ ನಾಯಕ, ಇದ್ದರು.

ರುಚಿಗಿಂತ ಆರೋಗ್ಯಕ್ಕೆ ಆದ್ಯತೆ ನೀಡಿ: ನ್ಯಾ. ನೂರುನ್ನಿಸಾ

ಪೌಷ್ಟಿಕ ಆಹಾರ ಸೇವನೆಯಿಂದ ಸದೃಢ ಆರೋಗ್ಯ ಸಾಧ್ಯ

ಗುಂಡ್ಲುಪೇಟೆ: ಮಹಿಳೆಯರು, ಮಕ್ಕಳು, ಗರ್ಭಿಣಿಯರು ಹಾಗೂ ಬಾಣಂತಿಯರಲ್ಲಿ ಪೌಷ್ಟಿಕಾಂಶದ ಕೊರತೆ ನಿವಾರಿಸಿ, ಆರೋಗ್ಯವಂತ ಸಮಾಜ ನಿರ್ಮಿಸುವ ಉದ್ದೇಶದಿಂದ ಪೋಷಣ್ ಮಾಸಾಚರಣೆ ನಡೆಸಲಾಗುತ್ತಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶೆ ನೂರುನ್ನಿಸಾ ಹೇಳಿದರು.

ತಾಲೂಕಿನ ಹೊನ್ನಶೆಟ್ಟರಹುಂಡಿ ಗ್ರಾಮದಲ್ಲಿ ತಾಲೂಕು ಕಾನೂನು ಸೇವೆಗಳ ಸಮಿತಿ, ತಾಲೂಕು ಆಡಳಿತ ಮತ್ತು ತಾಲೂಕು ಪಂಚಾಯಿತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಶು ಅಭಿವೃದ್ಧಿ ಯೋಜನೆ ಹಾಗೂ ಸಾಂತ್ವನ ಮಹಿಳಾ ಸಹಾಯವಾಣಿ ಕೇಂದ್ರದ ಸಹಯೋಗದಲ್ಲಿ ರಾಷ್ಟ್ರೀಯ ಪೋಷಣ್ ಅಭಿಯಾನದ ಅಂಗವಾಗಿ ಆಯೋಜಿಸಿದ್ದ ರಾಷ್ಟ್ರೀಯ ಪೋಷಣಾ ಮಾಸಾಚರಣೆ?2026 ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಅಪೌಷ್ಟಿಕತೆಯಿಂದಾಗಿ ಮಕ್ಕಳಲ್ಲಿ ಕಡಿಮೆ ತೂಕ, ಅಂಗವೈಕಲ್ಯ ಸೇರಿದಂತೆ ಹಲವು ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುವ ಸಾಧ್ಯತೆ ಇದೆ. ಬದಲಾಗುತ್ತಿರುವ ಜೀವನಶೈಲಿ, ಸಮಯದ ಅಭಾವ ಹಾಗೂ ಕೆಲಸದ ಒತ್ತಡದ ಕಾರಣ ಕೃತಕ ಹಾಗೂ ತ್ವರಿತ ಆಹಾರಗಳ ಸೇವನೆ ಹೆಚ್ಚುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ ಎಂದು ಹೇಳಿದರು.

ಮಕ್ಕಳ ಆರೋಗ್ಯದ ದೃಷ್ಟಿಯಿಂದ ತಾಯಂದಿರು ಮನೆಯಲ್ಲಿ ಪೌಷ್ಟಿಕ ಆಹಾರ ತಯಾರಿಸಿ ನೀಡುವ ಅಭ್ಯಾಸ ಬೆಳೆಸಿಕೊಳ್ಳಬೇಕು. ಸೊಪ್ಪು, ತರಕಾರಿ, ಮೊಳಕೆಕಾಳು ಹಾಗೂ ಇತರ ಪೌಷ್ಟಿಕಾಂಶಯುಕ್ತ ಆಹಾರ ಪದಾರ್ಥಗಳನ್ನು ದಿನನಿತ್ಯದ ಆಹಾರದಲ್ಲಿ ಬಳಸಬೇಕು ಎಂದು ಸಲಹೆ ನೀಡಿದರು. ಕಡಿಮೆ ಸಮಯದಲ್ಲಿ ಸಿದ್ಧವಾಗುವ ಕೃತಕ ಆಹಾರಗಳ ಅತಿಯಾದ ಸೇವನೆಯಿಂದ ಯುವತಿಯರಲ್ಲಿ ಸ್ಥೂಲಕಾಯ, ಪಿಸಿಓಡಿ ಸೇರಿದಂತೆ ವಿವಿಧ ಆರೋಗ್ಯ ಸಮಸ್ಯೆಗಳು ಎದುರಾಗುತ್ತಿವೆ. ಬದಲಾಗಿರುವ ಆಹಾರ ಪದ್ಧತಿಯೇ ಇಂತಹ ಸಮಸ್ಯೆಗಳ ಹೆಚ್ಚಳಕ್ಕೆ ಪ್ರಮುಖ ಕಾರಣವಾಗುತ್ತಿದೆ ಎಂದರು. ಕಾರ್ಯಕ್ರಮದಲ್ಲಿ ತಾಲೂಕು ಗ್ಯಾರಂಟಿ ಸಮಿತಿ ಅಧ್ಯಕ್ಷ ಉಮಾಪತಿ, ಡಾ. ರತ್ನಮ್ಮ, ಬಾಲ ನ್ಯಾಯ ಮಂಡಳಿ ಸದಸ್ಯೆ ಸರಸ್ವತಿ, ಸಿಡಿಪಿಒ ಹೇಮಾವತಿ, ನಾಗರಾಜು, ಸಂತೋಷ್ ಕುಮಾರ್ ಇತರರು ಉಪಸ್ಥಿತರಿದ್ದರು.

ಸರ್ವ ಸದಸ್ಯರ ವಾರ್ಷಿಕ ಮಹಾಸಭೆ

ಕೆ.ಆರ್.ನಗರ: ಹೈನುಗಾರಿಕಾ ಕ್ಷೇತ್ರದಲ್ಲಿ ಮಹಿಳೆಯರು, ಯುವಕರು, ರೈತರುಗಳು ತೊಡಗಿಸಿಕೊಳ್ಳುವ ಮೂಲಕ ಆರ್ಥಿಕ ಅಭಿವೃದ್ಧಿ ಹೊಂದಿ ಸ್ವಾವಲಂಬಿ ಬದುಕನ್ನು ನಡೆಸಬೇಕೆಂದು ಮೈಮುಲ್ ಮಾಜಿ ಅಧ್ಯಕ್ಷ ಎ.ಟಿ.ಸೋಮಶೇಖರ್ ಹೇಳಿದರು.

ಅವರು ತಾಲೂಕಿನ ಅಂಕನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ 2025 – 26ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಪಾಲ್ಗೊಂಡು ಮಾತನಾಡಿದರು. ಸಂಘದ ಸದಸ್ಯರುಗಳು ಸಂಘಕ್ಕೆ ಗುಣಮಟ್ಟದ ಹಾಲನ್ನು ಹಾಕುವ ಮೂಲಕ ಸಂಘದ ಅಭಿವೃದ್ಧಿಗೆ ಸಹಕರಿಸುವುದರೊಂದಿಗೆ ಸಂಘದ ಸರ್ವ ಸದಸ್ಯರುಗಳು ಕೂಡ ಆರ್ಥಿಕ ಅಭಿವೃದ್ಧಿಯನ್ನು ಹೊಂದಬೇಕು ಎಂದು ಕರೆ ನೀಡಿದರು. ಈ ಸಂದರ್ಭದಲ್ಲಿ ಹೈನುಗಾರಿಕಾ ಪಿತಾಮಹ ಡಾ.ವರ್ಗೀಸ್ ಕುರಿಯನ್ ಅವರ ಭಾವಚಿತ್ರಕ್ಕೆ ವಿಶೇಷ ಪೂಜೆಸಲ್ಲಿಸಿ ಪುಷ್ಪಾರ್ಚನೆ ಮಾಡಿ ಅವರ ಪುಣ್ಯ ಸ್ಮರಣೆ ಮಾಡುವ ಮೂಲಕ ಗೌರವ ನಮನ ಸಲ್ಲಿಸಲಾಯಿತು.

ಸಂಘಕ್ಕೆ ಅತಿ ಹೆಚ್ಚು ಹಾಲು ಹಾಕಿದ ಹಾಲು ಉತ್ಪಾದಕರುಗಳಾದ ಪವಿತ್ರಮಂಜುನಾಥ್, ಎ.ಎಸ್.ಜನಾರ್ಧನ್, ಕೋಟಿಗೌಡ ಅವರುಗಳಿಗೆ ಬಹುಮಾನಗಳನ್ನು ವಿತರಿಸಿ, ಸಂಘದ ನಿವೃತ್ತ ನೌಕರರಾದ ನಟರಾಜ್, ಕೆ.ಅಶೋಕ್ ಅವರುಗಳನ್ನ

ನಾಗಮಂಗಲ ತಾಲೂಕು ಕಚೇರಿಗೆ ಡಿಸಿ ಡಾ. ಕುಮಾರ್ ಭೇಟಿ

ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿ, ತ್ವರಿತ ಪರಿಹಾರಕ್ಕೆ ಸೂಚನೆ

ಮಂಡ್ಯ: ಜಿಲ್ಲಾಧಿಕಾರಿ ಡಾ. ಕುಮಾರ್ ಅವರು ನಾಗಮಂಗಲ ತಾಲೂಕು ಕಚೇರಿಗೆ ಭೇಟಿ ನೀಡಿ, ಕಚೇರಿಯ ವಿವಿಧ ವಿಭಾಗಗಳ ಕಾರ್ಯವೈಖರಿ ಹಾಗೂ ಸಾರ್ವಜನಿಕರಿಗೆ ಒದಗಿಸಲಾಗುತ್ತಿರುವ ಸೇವೆಗಳ ಕುರಿತು ಪರಿಶೀಲನೆ ನಡೆಸಿದರು.

ಈ ಸಂದರ್ಭದಲ್ಲಿ ಸಾರ್ವಜನಿಕರಿಂದ ನೇರವಾಗಿ ಅಹವಾಲುಗಳನ್ನು ಸ್ವೀಕರಿಸಿದ ಜಿಲ್ಲಾಧಿಕಾರಿಗಳು, ಕಂದಾಯ, ಪಿಂಚಣಿ, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಜಮೀನು ಸೇರಿದಂತೆ ವಿವಿಧ ಸಮಸ್ಯೆಗಳ ಕುರಿತು ಅಹವಾಲು ಸಲ್ಲಿಸಿದ ಸಾರ್ವಜನಿಕರೊಂದಿಗೆ ಚರ್ಚಿಸಿದರು.

ಸಾರ್ವಜನಿಕರ ಸಮಸ್ಯೆಗಳನ್ನು ವಿಳಂಬ ಮಾಡದೆ ನಿಯಮಾನುಸಾರ ಪರಿಶೀಲಿಸಿ, ಅರ್ಹ ಪ್ರಕರಣಗಳಲ್ಲಿ ತ್ವರಿತವಾಗಿ ಪರಿಹಾರ ಕಲ್ಪಿಸಬೇಕು. ಯಾವುದೇ ಕಾರಣಕ್ಕೂ ಸಾರ್ವಜನಿಕರು ಕಚೇರಿಗಳಿಗೆ ಅನಗತ್ಯವಾಗಿ ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗಬಾರದು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ತಾಲೂಕು ಕಚೇರಿಯಲ್ಲಿ ದಾಖಲೆಗಳ ನಿರ್ವಹಣೆ, ಅರ್ಜಿಗಳ ವಿಲೇವಾರಿ ಹಾಗೂ ವಿವಿಧ ಸರ್ಕಾರಿ ಸೇವೆಗಳ ಪ್ರಗತಿಯನ್ನು ಪರಿಶೀಲಿಸಿದ ಅವರು, ಬಾಕಿ ಇರುವ ಅರ್ಜಿಗಳನ್ನು ಆದ್ಯತೆಯ ಮೇರೆಗೆ ವಿಲೇವಾರಿ ಮಾಡುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಸಾರ್ವಜನಿಕರೊಂದಿಗೆ ಅಧಿಕಾರಿಗಳು ಸೌಜನ್ಯದಿಂದ ವರ್ತಿಸಿ, ಸರ್ಕಾರದ ಸೇವೆಗಳು ಅರ್ಹ ಫಲಾನುಭವಿಗಳಿಗೆ ಪಾರದರ್ಶಕವಾಗಿ ಮತ್ತು ಸಕಾಲದಲ್ಲಿ ತಲುಪುವಂತೆ ಕಾರ್ಯನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ಡಾ. ಕುಮಾರ್ ತಿಳಿಸಿದರು.

ಈ ಸಂದರ್ಭದಲ್ಲಿ ನಾಗಮಂಗಲ ತಹಶೀಲ್ದಾರ್ ಅಶೋಕ್ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಈಶ್ವರ ಖಂಡ್ರೆ ಭೇಟಿ ಬೆನ್ನಲ್ಲೇ ಹಿರೇಹಳ್ಳಿ ಕೆರೆ ಒತ್ತುವರಿ ತೆರವು

ಬೆಂಗಳೂರು: ಅರಣ್ಯ ಒತ್ತುವರಿದಾರರಿಗೆ ಸಿಂಹಸ್ವಪ್ನವಾಗಿದ್ದ ಈಶ್ವರ ಖಂಡ್ರೆ, ಈಗ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾಗಿ ಗ್ರಾ.ಪಂ.ಗೆ ಸೇರಿದ ಕೆರೆ ಒತ್ತುವರಿ ತೆರವಿಗೆ ಆದೇಶಿಸಿದ್ದು, ಇಂದು ತುಮಕೂರು, ಹಿರೇಹಳ್ಳಿಯ ಒತ್ತುವರಿ ಪ್ರದೇಶದ ತೆರವು ಕಾರ್ಯಾಚರಣೆ ನಡೆಯುತ್ತಿದೆ.

ರಾಜ್ಯದಲ್ಲಿ ಗ್ರಾ.ಪಂ.ಗೆ ಸೇರಿದ 32504 ಕೆರೆಗಳ ಪೈಕಿ ತೆರವಾಗದೆ ಉಳಿದಿರುವ 4828 ಕೆರೆಗಳ 11671 ಎಕರೆ ಒತ್ತುವರಿಯನ್ನು ನಿಯಮಾನುಸಾರ ತೆರವು ಮಾಡುವಂತೆ ಇತ್ತೀಚೆಗಷ್ಟೇ ಸಚಿವರು ಆದೇಶ ನೀಡಿದ್ದರು.

ಬಳಿಕ ಸೆ.5ರಂದು ತುಮಕೂರು ಗ್ರಾಮಾಂತರ ಜಿಲ್ಲೆ ಊರ್ಡಿಗೆರೆ ಹೋಬಳಿ ಹಿರೇಹಳ್ಳಿ ಕೆರೆ ಪ್ರದೇಶಕ್ಕೆ ಖುದ್ದು ಭೇಟಿ ನೀಡಿ ಒತ್ತುವರಿ ತೆರವಿಗೆ ಸೂಚನೆ ನೀಡಿದ್ದರು.

ಸಚಿವರ ಭೇಟಿ ಹಾಗೂ ಆದೇಶದ ಬೆನ್ನಲ್ಲೆ ಪಂಚಾಯತಿ ಅಧಿಕಾರಿಗಳು, ಸರ್ವೆ ನಂ.118ರಲ್ಲಿರುವ 17.32 ಎಕರೆ ಕೆರೆ ಅಂಗಳದ ಪೈಕಿ ಒತ್ತುವರಿಯಾಗಿರುವ ಪ್ರದೇಶವನ್ನು ಭೂಮಾಪಕರ ನೆರವಿನಿಂದ ಗುರುತಿಸಿ, ತೆರವು ಮಾಡಿ, ಗಡಿ ಗುರುತಿಸಿ ಹದ್ದುಬಸ್ತು ಮಾಡಲು ಮುಂದಾಗಿದ್ದಾರೆ.

ಜೆಸಿಬಿ ವಾಹನಗಳ ಜೊತೆ ಕಾರ್ಯಾಚರಣೆಗಿಳಿದಿರುವ ಪಂಚಾಯತಿ ಅಧಿಕಾರಿ, ಸಿಬ್ಬಂದಿ, ಅಕ್ರಮವಾಗಿ ಕೆರೆಗೆ ಮಣ್ಣು ತುಂಬಿ ಒತ್ತುವರಿ ಮಾಡಿದ್ದ ಸುಮಾರು 28 ಗುಂಟೆ ತೆರವು ಮಾಡಿಸಿದ್ದು, ಕೆರೆಯ ಹೆಚ್ಚಿನ ಭೂಮಿ ಸಾರ್ವಜನಿಕ ರಸ್ತೆಯಾಗಿ ಬಳಕೆಯಾಗುತ್ತಿರುವುದನ್ನು ಗುರುತಿಸಿದ್ದಾರೆ. ಕೆರೆಯ ಉಳಿಕೆ ಒತ್ತುವರಿ ತೆರವು ಕಾರ್ಯಾಚರಣೆ ಮುಂದುವರಿಯಲಿದೆ. ಸಂಪೂರ್ಣ 17.32 ಎಕರೆ ಕೆರೆಗೂ ಗಡಿ ಗುರುತು ಮಾಡುವ ಕಾರ್ಯ ಪ್ರಗತಿಯಲ್ಲಿದ್ದು, ಇದು ರಾಜ್ಯದ ಇತರೆ ಕೆರೆ ಒತ್ತುವರಿದಾರರಿಗೂ ಎಚ್ಚರಿಕೆಯ ಗಂಟೆಯಾಗಿದೆ.

ಸಂಗೀತದ ಮೂಲಕ ಮತದಾನದ ಸಂದೇಶ: ಸ್ವೀಪ್ ವಿನೂತನ ಪ್ರಯೋಗ

ಮಂಡ್ಯ: ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಮತ್ತಷ್ಟು ಸದೃಢಗೊಳಿಸುವ ಉದ್ದೇಶದಿಂದ ಯುವ ಮತದಾರರಲ್ಲಿ ಮತದಾನದ ಮಹತ್ವ, ಹಕ್ಕು ಹಾಗೂ ಜವಾಬ್ದಾರಿಯ ಕುರಿತು ಜಾಗೃತಿ ಮೂಡಿಸಲು ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ ವಿನೂತನ ಸಂಗೀತ ಸ್ಪರ್ಧೆಯನ್ನು ಆಯೋಜಿಸಲಾಗಿದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಕೆ.ಆರ್. ನಂದಿನಿ ತಿಳಿಸಿದರು.

ಮಂಡ್ಯ ವಿಶ್ವವಿದ್ಯಾಲಯದ ವಿಜ್ಞಾನ ವಿಭಾಗದ ಶಾರದಾ ಮಂದಿರದಲ್ಲಿ ಭಾರತ ಚುನಾವಣಾ ಆಯೋಗ, ಮುಖ್ಯ ಚುನಾವಣಾಧಿಕಾರಿಗಳ ಕಚೇರಿ, ಕರ್ನಾಟಕ, ಜಿಲ್ಲಾಡಳಿತ ಹಾಗೂ ಜಿಲ್ಲಾ ಸ್ವೀಪ್ ಸಮಿತಿ, ಜಿಲ್ಲಾ ಪಂಚಾಯತ್ ಮಂಡ್ಯ ವತಿಯಿಂದ ಆಯೋಜಿಸಿದ್ದ ಯುವ ಮತದಾರರ ಜಾಗೃತಿ ಗಾಯನ ಸ್ಪರ್ಧೆ ಹಾಡು ನನ್ನ ಹಾಡು ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

18 ವರ್ಷ ಪೂರ್ಣಗೊಂಡ ಪ್ರತಿಯೊಬ್ಬ ಯುವಜನರು ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಂಡು ಚುನಾವಣಾ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಪ್ರಜಾಪ್ರಭುತ್ವದಲ್ಲಿ ಪ್ರತಿಯೊಂದು ಮತವೂ ಅತ್ಯಂತ ಮಹತ್ವದ್ದಾಗಿದೆ. ಮತದಾನದ ಮೂಲಕ ನಾಗರಿಕರು ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡುತ್ತಾರೆ. ಪ್ರಜಾಪ್ರಭುತ್ವ ವ್ಯವಸ್ಥೆ ಸದೃಢವಾಗಿದ್ದಾಗ ಮಾತ್ರ ದೇಶದ ಅಭಿವೃದ್ಧಿ ಮತ್ತಷ್ಟು ವೇಗ ಪಡೆಯಲು ಸಾಧ್ಯ ಎಂದು ಹೇಳಿದರು.

ಯುವಜನರ ಸೃಜನಶೀಲತೆ ಹಾಗೂ ಪ್ರತಿಭೆಯನ್ನು ಬಳಸಿಕೊಂಡು ಮತದಾನದ ಮಹತ್ವದ ಕುರಿತು ಸಾಹಿತ್ಯ ರಚನೆ, ಸಂಗೀತ ಸಂಯೋಜನೆ ಹಾಗೂ ಗಾಯನ ಮಾಡುವ ವಿನೂತನ ಪ್ರಯೋಗವನ್ನು ಸ್ವೀಪ್ (SVEEPSystematic Voters Education and Electoral Participation) ಕಾರ್ಯಕ್ರಮದಡಿ ಕೈಗೊಳ್ಳಲಾಗಿದೆ. ಸಂಗೀತದಂತಹ ಪರಿಣಾಮಕಾರಿ ಮಾಧ್ಯಮದ ಮೂಲಕ ಮತದಾನದ ಸಂದೇಶವನ್ನು ಯುವಜನರಿಗೆ ಸುಲಭವಾಗಿ ಹಾಗೂ ಪರಿಣಾಮಕಾರಿಯಾಗಿ ತಲುಪಿಸುವುದು ಇದರ ಉದ್ದೇಶವಾಗಿದೆ ಎಂದರು.

ಈಗಾಗಲೇ 15 ತಂಡಗಳು ಸ್ಪರ್ಧೆಗೆ ನೋಂದಾಯಿಸಿಕೊಂಡಿದ್ದು, ಅತ್ಯುತ್ತಮವಾಗಿ ಮೂಡಿಬರುವ ಗೀತೆಗಳಿಗೆ ಪ್ರಥಮ ಬಹುಮಾನ 10,000, ದ್ವಿತೀಯ ಬಹುಮಾನ 5,000 ಹಾಗೂ ತೃತೀಯ ಬಹುಮಾನ 2,500 ನೀಡಲಾಗುವುದು.

ಸ್ಪರ್ಧೆಯಲ್ಲಿ ಮೂಡಿಬರುವ ಅತ್ಯುತ್ತಮ ಗೀತೆಯನ್ನು ಮಂಡ್ಯ ಜಿಲ್ಲೆಯ ಚುನಾವಣಾ ಜಾಗೃತಿ ಗೀತೆ (Election Theme Song) ಯಾಗಿ ಆಯ್ಕೆ ಮಾಡಲಾಗುವುದು. ಮುಂದಿನ ದಿನಗಳಲ್ಲಿ ಜಿಲ್ಲೆಯಾದ್ಯಂತ ನಡೆಯುವ ಚುನಾವಣಾ ಜಾಗೃತಿ ಹಾಗೂ ಮತದಾರರ ಅರಿವು ಕಾರ್ಯಕ್ರಮಗಳಲ್ಲಿ ಈ ಗೀತೆಯನ್ನು ಬಳಸಿಕೊಳ್ಳಲು ಉದ್ದೇಶಿಸಲಾಗಿದೆ ಎಂದು ತಿಳಿಸಿದರು.

ಸೆಪ್ಟೆಂಬರ್ 19 ಮತ್ತು 20ರಂದು ಮತದಾರರ ಜಾಗೃತಿಗಾಗಿ ತೀವ್ರ ಅಭಿಯಾನ ಹಮ್ಮಿಕೊಳ್ಳಲಾಗುತ್ತಿರುವ ಹಿನ್ನೆಲೆಯಲ್ಲಿ, ಸಂಗೀತದಂತಹ ಪರಿಣಾಮಕಾರಿ ಮಾಧ್ಯಮದ ಮೂಲಕ ಪ್ರತಿಯೊಬ್ಬ ಮತದಾರನಿಗೂ ಮಾಹಿತಿ, ಪ್ರತಿಯೊಂದು ಮತಕ್ಕೂ ಮಹತ್ವ ಎಂಬ ಸಂದೇಶವನ್ನು ಜಿಲ್ಲೆಯಾದ್ಯಂತ ತಲುಪಿಸಲು ಈ ಕಾರ್ಯಕ್ರಮ ಸಹಕಾರಿಯಾಗಲಿದೆ ಎಂದರು.

ವಿಶೇಷ ಸಮಗ್ರ ಪರಿಷ್ಕರಣೆ 2026 (SIR 2026) ಹಿನ್ನೆಲೆಯಲ್ಲಿ ಯುವ ಮತದಾರರಲ್ಲಿ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಣಿ, ಮತದಾನದ ಹಕ್ಕು ಹಾಗೂ ಚುನಾವಣಾ ಪ್ರಕ್ರಿಯೆಯ ಕುರಿತು ಅರಿವು ಮೂಡಿಸುವ ಚಟುವಟಿಕೆಗಳಿಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ನನ್ನ ಮತ ನನ್ನ ಹಕ್ಕು, ನನ್ನ ಜವಾಬ್ದಾರಿ ಎಂಬ ಸಂದೇಶವನ್ನು ಯುವಜನರಿಗೆ ತಲುಪಿಸುವ ಮೂಲಕ ಮತದಾನ ಪ್ರಮಾಣವನ್ನು ಹೆಚ್ಚಿಸುವ ಗುರಿ ಹೊಂದಲಾಗಿದೆ ಎಂದು ಹೇಳಿದರು.

ಮತದಾನ ಕೇವಲ ಹಕ್ಕಲ್ಲ, ಪ್ರತಿಯೊಬ್ಬ ಅರ್ಹ ನಾಗರಿಕನ ಜವಾಬ್ದಾರಿಯೂ ಆಗಿದೆ. ನನ್ನ ಒಂದು ಮತದಿಂದ ಏನು ಬದಲಾವಣೆ ಸಾಧ್ಯ ಎಂಬ ಮನೋಭಾವವನ್ನು ತೊರೆದು, ಪ್ರತಿಯೊಂದು ಮತವೂ ಅಮೂಲ್ಯ ಎಂಬ ಅರಿವಿನೊಂದಿಗೆ ಯುವಜನರು ಚುನಾವಣಾ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಸಂಗೀತದ ಮೂಲಕ ಮತದಾನದ ಸಂದೇಶವನ್ನು ಯುವಜನರಿಗೆ ಪರಿಣಾಮಕಾರಿಯಾಗಿ ತಲುಪಿಸುವ ಉದ್ದೇಶದಿಂದ ಆಯೋಜಿಸಿದ್ದ ಗಾಯನ ಸ್ಪರ್ಧೆಯಲ್ಲಿ ಸ್ಪರ್ಧಿಗಳು ಸ್ವಯಂ ರಚಿಸಿದ ಗೀತೆಗಳನ್ನು ಹಾಡಿ ಗಮನ ಸೆಳೆದರು. ಮತದಾನದ ಮಹತ್ವ, ಮತದಾರರ ಹಕ್ಕು ಮತ್ತು ಜವಾಬ್ದಾರಿಯನ್ನು ಸಾರುವ ಗೀತೆಗಳು ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿದ್ದವು. ಕಾರ್ಯಕ್ರಮದಲ್ಲಿ ಮಂಡ್ಯ ವಿಶ್ವವಿದ್ಯಾನಿಲಯದ ಕುಲಪತಿ ಕಲ್ಪಶ್ರೀ, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಲಕ್ಷ್ಮೀ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ವಿ. ನಂದೀಶ್ ಹಾಗೂ ಯೋಜನಾ ನಿರ್ದೇಶಕ ಚಂದ್ರಶೇಖರ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

3 ಕೋಟಿ 15 ಲಕ್ಷ ರೂಗಳ ವಿವಿಧ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ

ಮಂಡ್ಯ: ಮೇಲುಕೋಟೆ ವಿಧಾನ ಸಭೆ ವ್ಯಾಪ್ತಿಯ ದುದ್ದ ಹೋಬಳಿಯ ವಿವಿಧ ಗ್ರಾಮಗಳಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಮೇಲುಕೋಟೆ ಕ್ಷೇತ್ರದ ಶಾಸಕ ದರ್ಶನ್ ಪುಟ್ಟಣ್ಣಯ್ಯ ಗುದ್ದಲಿ ಪೂಜೆ ನೆರವೇರಿದರು

ದುದ್ದ ಹೋಬಳಿಯ ವಿವಿಧ ಗ್ರಾಮಗಳಲ್ಲಿ ಮೇಲುಕೋಟೆ ಕ್ಷೇತ್ರದ ಶಾಸಕ ದರ್ಶನ್ ಪುಟ್ಟಣ್ಣಯ್ಯನವರು ಸುಮಾರು 3.ಕೋಟಿ 15 ಲಕ್ಷ ರೂ ಅಂದಾಜು ವೆಚ್ಚದಲ್ಲಿ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿ

ಮುಖ್ಯಮಂತ್ರಿಗಳ ವಿಶೇಷ ಅನುದಾನದಲ್ಲಿ ಲೋಕೋಪಯೋಗಿ ಇಲಾಖೆಯ ವತಿಯಿಂದ ಈ ದಿನ ವಿವಿಧ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿದ್ದೇವೆ ಎಂದರು

ಶ್ರೀ ಸಾಯಿ ನಿಕೇತನ ಶಾಲೆಯ ಮುಖ್ಯರಸ್ತೆ, ರಸ್ತೆ ಕಾಮಗಾರಿಗೆ ಒಂದು ಕೋಟಿ ರೂ, ಅವ್ವೇರಹಳ್ಳಿ 15 ಲಕ್ಷ ರೂ , ಬಿಳಗುಲಿ 25 ಲಕ್ಷ ರೂ, ಕುರಿ ಕೊಪ್ಪಲು 20 ಲಕ್ಷರೂ, ಚಂದಗಾಲು 20 ಲಕ್ಷ ರೂ, ಬೀರೇಗೌಡನಹಳ್ಳಿ 45 ಲಕ್ಷ ರೂ, ಸಂಪಹಳ್ಳಿ 15 ಲಕ್ಷ ರೂ, ಶಿವಳ್ಳಿ 25 ಲಕ್ಷ ರೂ, ಹುಳ್ಳೇನಹಳ್ಳಿ 50 ಲಕ್ಷ ರೂ, ಒಟ್ಟು ಮೂರು ಕೋಟಿ ಹದಿನೈದು ಲಕ್ಷ ರೂಗಳ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ಮಾಡಿದ್ದೇವೆ ಎಂದರು

ನಿಗದಿತ ಸಮಯಕ್ಕೆ ಸರಿಯಾಗಿ ಕಾಮಗಾರಿಯನ್ನು ಪೂರ್ಣಗೊಳಿಸಬೇಕು ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಚಂದಗಾಲು ಗ್ರಾಮದ ಎಪಿಎಂಸಿ ಮಾಜಿ ಅಧ್ಯಕ್ಷ ಸಿ.ಕೆ. ನಾಗರಾಜ್, ಸೊಸೈಟಿ ಅಧ್ಯಕ್ಷ ರಾಮಕೃಷ್ಣ, ನಿಂಗೇಗೌಡ, ಸಿದ್ದರಾಜು, ಬಿಳಗುಲಿ ಗ್ರಾಮದ ಮುಖಂಡರಾದ ಪಟೇಲ್ ಶಿವಕುಮಾರ್, ಮಹದೇವಪ್ಪ, ಎಲ್ಲರೊಳಗೊಂದಾಗು ಮಂಕುತಿಮ್ಮ ಟೆಸ್ಟ್ ಅಧ್ಯಕ್ಷ ವಿನಯ್ ಕುಮಾರ್, ಅಣ್ಣ ಬಸವರಾಜ್, ರೇಣುಕಾರಾಧ್ಯ, ಕೆಂಪಾಚಾರಿ, ರಾಜೇಶ್, ರಾಜಶ್ವ ನಿರೀಕ್ಷಕರಾದ ಲೋಹಿತ್, ಲೋಕೋಪಯೋಗಿ ಇಲಾಖೆಯ ಸಹಾಯಕ ಇಂಜಿನಿಯರ್ ಜಗದೀಶ್, ಗುತ್ತಿಗೆದಾರರ ಉಮೇಶ್, ರವಿ ,ಶರತ್ ,ಹಾಗೂ ಆಯಾ ಗ್ರಾಮದ ಮುಖಂಡರು ಉಪಸ್ಥಿತರಿದ್ದರು.

ಆರೋಗ್ಯ ಇಲಾಖೆಯ ಅನುದಾನ ಸಮರ್ಪಕ ಬಳಕೆಗೆ ಸೂಚನೆ

ಮಂಡ್ಯ: ಜಿಲ್ಲಾ ಆರೋಗ್ಯ ಇಲಾಖೆಯ ವಿವಿಧ ಆರೋಗ್ಯ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಬಿಡುಗಡೆಯಾಗಿರುವ ಅನುದಾನವನ್ನು ಸರ್ಕಾರದ ಮಾರ್ಗಸೂಚಿ ಹಾಗೂ ನಿಗದಿತ ಕಾರ್ಯವಿಧಾನಗಳನ್ವಯ ಸಮರ್ಪಕವಾಗಿ ಬಳಸುವಂತೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ನಂದಿನಿ ಕೆ.ಆರ್. ರವರು ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಪಂಚಾಯತ್‌ನ ಮಿನಿ ಸಭಾಂಗಣದಲ್ಲಿ ಜಿಲ್ಲಾ ಆರೋಗ್ಯ ಇಲಾಖೆಯ ವತಿಯಿಂದ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ರಾಜ್ಯ ಸರ್ಕಾರದಿಂದ ವಿವಿಧ ಆರೋಗ್ಯ ಕಾರ್ಯಕ್ರಮಗಳಡಿ ಬಿಡುಗಡೆಯಾಗುವ ಅನುದಾನವನ್ನು ಸಂಬಂಧಿಸಿದ ಘಟಕಗಳಿಗೆ ನಿಗದಿಪಡಿಸಿರುವ ಉದ್ದೇಶಕ್ಕೆ ಮಾತ್ರ ಬಳಸಬೇಕು. ಪ್ರತಿಯೊಂದು ಕಾರ್ಯಕ್ರಮದ ಅನುದಾನದ ಬಳಕೆ, ಕಾರ್ಯಯೋಜನೆ ಹಾಗೂ ಅನುಷ್ಠಾನದ ಪ್ರಗತಿಯನ್ನು ಸಂಬಂಧಿಸಿದ ಕಾರ್ಯಕ್ರಮಾಧಿಕಾರಿಗಳು ಸಮಗ್ರವಾಗಿ ಪರಿಶೀಲಿಸಬೇಕೆಂದರು.

ಮಾತೃ ಆರೋಗ್ಯ, ಶಿಶು ಆರೋಗ್ಯ, ಲಸಿಕಾ ಕಾರ್ಯಕ್ರಮ, ಪೌಷ್ಟಿಕಾಂಶ, ಕುಟುಂಬ ಕಲ್ಯಾಣ ಸೇರಿದಂತೆ ವಿವಿಧ ಕಾರ್ಯಕ್ರಮಗಳಡಿ ಬಿಡುಗಡೆಯಾಗಿರುವ ಅನುದಾನವನ್ನು ಫಲಾನುಭವಿಗಳ ಅಗತ್ಯತೆ ಹಾಗೂ ಆರೋಗ್ಯ ಸಂಸ್ಥೆಗಳ ಬೇಡಿಕೆಯ ಆಧಾರದ ಮೇಲೆ ಆದ್ಯತೆಯೊಂದಿಗೆ ಬಳಸಬೇಕು. ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳಿಗೆ ಬಿಡುಗಡೆಯಾಗುವ ಅನುದಾನವು ನಿಗದಿತ ಉದ್ದೇಶಕ್ಕೆ ಸಮರ್ಪಕವಾಗಿ ಬಳಕೆಯಾಗುತ್ತಿರುವುದನ್ನು ಸಂಬಂಧಿಸಿದ ಕಾರ್ಯಕ್ರಮ ಅಧಿಕಾರಿಗಳು ಮತ್ತು ತಾಲೂಕು ಆರೋಗ್ಯಾಧಿಕಾರಿಗಳು ಖಚಿತಪಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಅರ್ಹ ಫಲಾನುಭವಿಗಳಿಗೆ ಆರೋಗ್ಯ ಸೇವೆ ನಿರಾಕರಿಸಬಾರದು

ಅನುದಾನದ ಕೊರತೆಯ ಕಾರಣದಿಂದ ಯಾವುದೇ ಅರ್ಹ ಫಲಾನುಭವಿಗೆ ಅಗತ್ಯ ಆರೋಗ್ಯ ಸೇವೆ ನಿರಾಕರಿಸುವಂತಿಲ್ಲ. ನಿರ್ದಿಷ್ಟ ಕಾರ್ಯಕ್ರಮದಲ್ಲಿ ಫಲಾನುಭವಿಗಳ ಸಂಖ್ಯೆ ಹೆಚ್ಚಾಗಿ ಹೆಚ್ಚುವರಿ ಅನುದಾನದ ಅಗತ್ಯವಿದ್ದಲ್ಲಿ, ಸಂಬಂಧಿಸಿದ ಅಧಿಕಾರಿಗಳು ಸೂಕ್ತ ದಾಖಲೆಗಳೊಂದಿಗೆ ಹೆಚ್ಚುವರಿ ಅನುದಾನಕ್ಕಾಗಿ ಮೇಲಧಿಕಾರಿಗಳಿಗೆ ಲಿಖಿತವಾಗಿ ಪ್ರಸ್ತಾವನೆ ಸಲ್ಲಿಸಬೇಕು ಎಂದು ಸಿಇಒ ಸೂಚಿಸಿದರು.

ಆರೋಗ್ಯ ಕೇಂದ್ರಗಳಲ್ಲಿ ಅಗತ್ಯವಿರುವ ಲ್ಯಾಬ್ ಪರೀಕ್ಷೆಗಳು, ಔಷಧಿ ಹಾಗೂ ಕನ್ಸ್ಯೂಮಬಲ್ಸ್‌ಗಳ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಬೇಕು. ಸ್ಥಳೀಯವಾಗಿ ಪರೀಕ್ಷಾ ಸೌಲಭ್ಯ ಲಭ್ಯವಿಲ್ಲದಿದ್ದಲ್ಲಿ, ನಿಯಮಾನುಸಾರ ಮಾದರಿ ಸಂಗ್ರಹಿಸಿ ಪರೀಕ್ಷೆ ನಡೆಸುವ ವ್ಯವಸ್ಥೆ ಕಲ್ಪಿಸಬೇಕು. ವಿಶೇಷವಾಗಿ ಗರ್ಭಿಣಿಯರು ಹಾಗೂ ತಾಯಿ–ಮಕ್ಕಳಿಗೆ ಸಂಬಂಧಿಸಿದ ಆರೋಗ್ಯ ಸೇವೆಗಳಲ್ಲಿ ಯಾವುದೇ ವಿಳಂಬವಾಗದಂತೆ ಕ್ರಮವಹಿಸಬೇಕು ಎಂದರು.

ಟೆಂಡರ್ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಕಡ್ಡಾಯ

ಆರೋಗ್ಯ ಇಲಾಖೆಗೆ ಸಂಬಂಧಿಸಿದ ಟೆಂಡರ್ ಪ್ರಕ್ರಿಯೆಗಳನ್ನು ಸರ್ಕಾರದ ನಿಯಮಗಳು ಹಾಗೂ ಮಾರ್ಗಸೂಚಿಗಳಂತೆ ಪಾರದರ್ಶಕವಾಗಿ ಕೈಗೊಳ್ಳಬೇಕು. ಟೆಂಡರ್ ಕರೆಯುವಿಕೆ, ಬಿಡ್‌ಗಳ ಪರಿಶೀಲನೆ ಹಾಗೂ ಮೌಲ್ಯಮಾಪನ ಸೇರಿದಂತೆ ಪ್ರತಿಯೊಂದು ಹಂತದಲ್ಲೂ ಅನಗತ್ಯ ವಿಳಂಬಕ್ಕೆ ಅವಕಾಶ ನೀಡಬಾರದು ಎಂದು ನಂದಿನಿ ಕೆ.ಆರ್. ಅವರು ನಿರ್ದೇಶಿಸಿದರು.

ಯಾವುದೇ ವಿಷಯದಲ್ಲಿ ವಿಳಂಬ ಅಥವಾ ವಿಶೇಷ ಅನುಮೋದನೆಯ ಅಗತ್ಯವಿದ್ದಲ್ಲಿ, ಅದರ ಕಾರಣವನ್ನು ಸ್ಪಷ್ಟವಾಗಿ ದಾಖಲಿಸಿ ಲಿಖಿತವಾಗಿ ಸಲ

ಅನುಪಮ ಶರಣ ದಂಪತಿಗಳು.... ಮೋಳಿಗೆಯ ಮಾರಯ್ಯ ಮತ್ತು ಮಹಾದೇವಿ

। ವೀಣಾ ಹೇಮಂತ್‌ಗೌಡ ಪಾಟೀಲ್

ಅದು ಕಲ್ಯಾಣದ ವಚನ ಚಳುವಳಿಯ ಉತ್ತುಂಗದ ಕಾಲ. ಕಾಯಕ, ದಾಸೋಹ ಮತ್ತು ಅನುಭಾವಗಳು ಜನರ ಬದುಕಿನ ಭಾಗವಾಗಿದ್ದವು. ಅಕ್ಷರಸ್ಥರಲ್ಲದವರು ಕೂಡ ಸಾಕ್ಷರರಾದಂತಹ ಕಾಲ. ನಿರಕ್ಷರಿಗಳು ಕೂಡ ವಚನಗಳನ್ನು ರಚಿಸಿದಂತಹ ಕಾಲ. ತನ್ನ ಅನುಭವದ ನುಡಿಗಳನ್ನು ಅನುಭಾವಕ್ಕೆ ಇಳಿಸಿದ ಈ ಸಮಯದಲ್ಲಿ ಕಲ್ಯಾಣದ ಕೀರ್ತಿ ಜಗದಗಲ ಹರಡಿತ್ತು. ಎಲ್ಲೆಡೆ ಬಸವಣ್ಣನವರ ಗುಣಗಾನ ಅವರ ಸಾಮಾಜಿಕ ಕ್ರಾಂತಿಕಾರಕ ವಿಚಾರಧಾರೆಗಳು ಮತ್ತು ವಚನ ಸಾಹಿತ್ಯದ ಚಟುವಟಿಕೆಗಳು ಅನುಭವ ಮಂಟಪದ ವಿಷಯಗಳು ಮನೆಮನೆಗಳನ್ನು ತಲುಪಿದ್ದವು.

ಇತ್ತ ದೇಶದ ಉತ್ತರ ಭಾಗದ ಹಿಮಾಲಯ ಧವಳ ಕಿರೀಟ ಹೊತ್ತ ನಾಡು ಕಾಶ್ಮೀರದಲ್ಲಿ ಕೂಡ ಬಸವಣ್ಣನವರ ಖ್ಯಾತಿ ಹರಡಿತ್ತು. ಧರೆಗಿಳಿದ ಸ್ವರ್ಗ ಎಂದೇ ಖ್ಯಾತವಾದ ಕಾಶ್ಮೀರದ ಸವಾಲಾಕ್ಷ ಪ್ರದೇಶದ ಮಾಂಡವ್ಯಪುರವನ್ನು ಆಳುತ್ತಿದ್ದ ರಾಜ ಮಹಾದೇವ ಭೂಪಾಲ ಮಹಾನ್ ಶಿವ ಭಕ್ತನಾಗಿದ್ದನು. ಪ್ರತಿದಿನವೂ ಆತ ತನ್ನ ರಾಜಧಾನಿಯಲ್ಲಿ 6 ಸಾವಿರಕ್ಕೂ ಹೆಚ್ಚು ಶಿವ ಗಣಗಳಿಗೆ ಅನ್ನದಾಸೋಹ ನಡೆಸುತ್ತಿದ್ದನು. ಆತನ ಈ ಕೈಂಕರ್ಯದಲ್ಲಿ ಪತ್ನಿ ಗಂಗಾಂಬಿಕೆ ತನ್ನ ಅಹರ್ನಿಶಿ ಸೇವೆಯನ್ನು ಸಲ್ಲಿಸುತ್ತಿದ್ದಳು. ಸತಿಪತಿಗಳೊಂದಾದ ಭಕ್ತಿಯು ಹಿತವಪ್ಪುದು ಶಿವಂಗೆ ಎನ್ನುವಂತೆ ಇವರೀರ್ವರ ದಾಸೋಹ ಸೇವೆಗೆ ಮೆಚ್ಚಿ ಸಾವಿರಾರು ಜನ ಪ್ರತಿದಿನ ರಾಜಧಾನಿಯಲ್ಲಿ ದಾಸೋಹವನ್ನು ಸ್ವೀಕರಿಸುತ್ತಿದ್ದರು.

ಆದರೆ ಏನಾಶ್ಚರ್ಯ!! ಇದ್ದಕ್ಕಿದ್ದಂತೆ ದಾಸೋಹಕ್ಕೆ ಬರುತ್ತಿದ್ದ ಜನಗಳು ಕಡಿಮೆಯಾಗಹತ್ತಿದರು. ಕೊನೆಗೊಂದು ದಿನ ದಾಸೋಹ ಸೇವೆ ನಿಲ್ಲುವಂತಾಗುವ ಪರಿಸ್ಥಿತಿ ಬಂದಾಗ, ಅರಮನೆಯ ಅಧಿಕಾರಿಗಳು ಮಹಾರಾಜನಲ್ಲಿ ಬಂದು ಈ ವಿಷಯವನ್ನು ಅರುಹಿದರು. ರಾಜನು ಚಿಂತಾಕ್ರಾಂತನಾಗಿ ಇದರ ಕಾರಣವನ್ನು ಹುಡುಕಿದಾಗ ಆತನಿಗೆ ದೊರೆತು ಬಂದ ಮಾಹಿತಿ ಎಂದರೆ ದಕ್ಷಿಣದ ಕಲ್ಯಾಣ ಚಾಲುಕ್ಯ ಅರಸರ ಸಾಮಂತನಾದ ಕಲಾಚೂರ್ಯ ವಂಶದ ಬಿಜ್ಜಳ ಮಹಾರಾಜನ ಮಹಾಮಂತ್ರಿ ಬಸವಣ್ಣನವರು ಕಲ್ಯಾಣದಲ್ಲಿ

ಮೋಳಿಗೆ ಮಹಾದೇವಿ - ಮೋಳಿಗೆ ಮಾರಯ್ಯ ದಂಪತಿ

ನಡೆಸುತ್ತಿದ್ದ ಮಹಾಮಣಿಹದಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಲು ಕಲ್ಯಾಣಕ್ಕೆ ವಲಸೆ ಹೋಗಿರುವುದಾಗಿ ತಿಳಿದು ಬಂತು. ಅಲ್ಲಿ ಒಂದು ಲಕ್ಷ ಅರವತ್ತು ಸಾವಿರಕ್ಕೂ ಮೀರಿದ ಗಣಂಗಳಿಗೆ ಪ್ರತಿದಿನ ದಾಸೋಹ ವ್ಯವಸ್ಥೆಯಾಗುವುದನ್ನು ಅರಿತ ಮಹಾರಾಜನು ಆಶ್ಚರ್ಯಚಕಿತನಾದನು. ಮುಂದೆ ಕೆಲವೇ ದಿನಗಳಲ್ಲಿ ಚಾರರಿಂದ ಮಾಹಿತಿಯನ್ನು ಸಂಗ್ರಹಿಸಿದ ಮಹಾರಾಜನು ಬಸವಣ್ಣನವರ ಕಾಯಕ, ದಾಸೋಹ ಮತ್ತಿತರ ಕ್ರಾಂತಿಕಾರಕ ಕಾರ್ಯಗಳು ಮಾಡಿರುವ ಪರಿಣಾಮಗಳ ಸೆಳವಿಗೆ ಒಳಗಾಗಿ ತಾನು ಕೂಡ ಬಸವಣ್ಣನವರ ಬಳಿ ಹೋಗಲು, ಅಲ್ಲಿಯೇ ಜೀವಿತದ ಉಳಿದ ಭಾಗವನ್ನು ಕಳೆಯಲು ಆಶಿಸಿದನು. ಭೂಲೋಕದ ಸ್ವರ್ಗ ಎಂಬ ಹೆಸರನ್ನು ಪಡೆದ ತನ್ನ ರಾಜಧಾನಿಯನ್ನು, ಅರಮನೆಯ ವೈಭೋಗಗಳನ್ನು, ಸಿರಿಸಂಪತ್ತನ್ನು ತೊರೆದು ತನ್ನ ಮಗ ಲಿಂಗಾರತಿಗೆ ರಾಜನ ಪಟ್ಟಗಟ್ಟಿ ಹೊರಟು ನಿಂತನು. ತನ್ನೊಂದಿಗೆ ಹೊರಟು ನಿಂತ ಪತ್ನಿಯನ್ನು ಮಗನೊಂದಿಗೆ ಅಲ್ಲಿಯೇ ಇರುವಂತೆ ಒತ್ತಾಯಿಸಿದ ಮಹಾರಾಜನು ಅರಮನೆಯ ಸುಖ ಭೋಗಗಳನ್ನು ಮರೆತು ಇರಲು ನಿನಗೆ ಸಾಧ್ಯವಿಲ್ಲ, ವಯಸ್ಸಾದ ಈ ಕಾಲದಲ್ಲಿ ಅರಮನೆಯಲ್ಲಿಯೇ ಮಗನ ಜೊತೆ ಕಾಲ ಕಳೆ ಎಂದು ಪತ್ನಿಗೆ ಹೇಳಿದನು. ಅದಕ್ಕೆ ಒಪ್ಪದ ಪತ್ನಿ ಗಂಗಾಂಬಿಕೆ ಪತಿಯ ನೆರಳಲ್ಲಿಯೇ ಸತಿಗೆ ಸುಖವಿಹುದು ಎಂದು ಹೇಳಿ ಆತನೊಂದಿಗೆ ತಾನು ಹೊರಟು ನಿಂತಳು.

ಕಲ್ಯಾಣಕ್ಕೆ ಬಂದು ಅನುಭವ ಮಂಟಪದಲ್ಲಿ ಬಸವಾದಿ ಪ್ರಮಥರನ್ನು ಕಂಡು ಸಹರ್ಷದಿಂದ ತಾವು ಕಾಯಕ ಜೀವಿಗಳಾಗಿದ್ದುಕೊಂಡು ಕಲ್ಯಾಣದಲ್ಲಿಯೇ ನೆಲೆಸುವುದಾಗಿ ಹೇಳಿದ ಮಹದೇವ ಭೂಪಾಲನು ತನ್ನ ಹೆಸರನ್ನು ಮಾರಯ್ಯ ಎಂದು ಬದಲಾಯಿಸಿಕೊಂಡನು. ಪತ್ನಿ ಮಹಾದೇವಿಯಾದಳು. ಕಟ್ಟಿಗೆ ಕಡಿದು ಮಾರುವ ಕಾಯಕವನ್ನು ತನ್ನ ವೃತ್ತಿಯನ್ನಾಗಿಸಿಕೊಂಡನು.

ಕಾಡಿನಲ್ಲಿರುವ ಒಣಗಿದ ಮರಗಳನ್ನು ಮಾತ್ರ ಕಡಿದು ಅವುಗಳನ್ನು ಹೊರೆ (ಹೊರೆಯನ್ನು ಮೋಳಿಗೆ ಎಂದು ಕರೆಯುತ್ತಾರೆ) ಮಾಡಿ ತರುತ್ತಿದ್ದನು ಮಾರಯ್ಯ. ನಂತರ ಪ್ರತಿ ಪತ್ನಿಯರಿಬ್ಬರೂ ಅವುಗಳನ್ನು ಏಂಗಡಿಸಿ ದೊಡ್ಡ ಸಣ್ಣ ಹೊರೆಗಳನ್ನಾಗಿ ಮಾಡಿ ಅವುಗಳನ್ನು ಕಲ್ಯಾಣದ ಬೀದಿಗಳಲ್ಲಿ ಮನೆ ಮನೆಗೆ ಹೊತ್ತು ಮಾರಿ ಬಂದ ಹಣದಲ್ಲಿ ಮನೆಯನ್ನು ನಿಭಾಯಿಸುತ್ತಿದ್ದರು. ಬೆಳಗಿನ ಜಾವದಲ್ಲಿ ಎದ್ದು ನಿತ್ಯ ಕರ್ಮಗಳನ್ನು ಪೂರೈಸಿ ಸ್ನಾನ ಮತ್ತು ಲಿಂಗ ಪೂಜೆಯ ನಂತರ ಆಹಾರ ಸ್ವೀಕರಿಸಿ ನಂತರ ಕಟ್ಟಿಗೆ ಕಡಿದು ತಂದು ಮಾರುವ ಕಾರ್ಯ ಮಾಡಿದರೆ ಪ್ರತಿದಿನ ಸಂಜೆಯ ಸಮಯದಲ್ಲಿ ಅನುಭವ ಮಂಟಪದಲ್ಲಿ ಶರಣ ಬಂಧುಗಳೊಂದಿಗೆ ಸೇರಿ ಭಕ್ತಿ ಜ್ಞಾನ ವೈರಾಗ್ಯ ಕುರಿತಾದ ಹಲವಾರು ವಿಷಯಗಳನ್ನು ಚರ್ಚೆಯ ಮುನ್ನೆಲೆಗೆ ತಂದು ಚರ್ಚಿಸುವ ಮೂಲಕ ತಮ್ಮ ಅನುಭಾವವನ್ನು ಹೆಚ್ಚಿಸಿಕೊಳ್ಳುತ್ತಿದ್ದರು.

ಮೋಳಿಗೆ ಮಾರಯ್ಯನವರು ವಿವಿಧ ಭಾಷೆಗಳಲ್ಲಿ ಪ್ರಕಾಂಡ ಪಂಡಿತರಾಗಿದ್ದರು. ಕನ್ನಡವನ್ನು ಮಾತನಾಡಲು,ಓದಲು, ಬರೆಯಲು ಕಲಿತು ಕನ್ನಡದಲ್ಲಿ ಸುಮಾರು 818 ವಚನಗಳನ್ನು ಅವರು ರಚಿಸಿದರು. ನಿಃಕಳಂಕ ಮಲ್ಲಿಕಾರ್ಜುನ ಎಂಬುದು ಅವರ ವಚನದ ಅಂಕಿತ ನಾಮವಾಗಿತ್ತು. ಪತ್ನಿ ಮಹಾದೇವಿ ಕೂಡ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನ ಎಂಬ ಅಂಕಿತದಲ್ಲಿ ವಚನಗಳನ್ನು ರಚಿಸಿದಳು. ಮನುಷ್ಯ ತನ್ನಲ್ಲಿರುವ ಅರಿ ಷಡ್ವರ್ಗಗಳನ್ನು ಹಿಡಿತದಲ್ಲಿಟ್ಟುಕೊಂಡರೆ ಅದೇ ಷಟ್ ಸ್ಥಳ ಅವರೋಹಣ ಮಾಡಿದಂತೆ ಎಂಬುದು ಮಾರಯ್ಯನವರ ಅಭಿಪ್ರಾಯವಾಗಿತ್ತು. ಮಾರಯ್ಯನವರ ಕುರಿತು ತೆಲುಗಿನ ಬಸವ ಪುರಾಣದಲ್ಲಿ ಉಲ್ಲೇಖಗಳು ಇವೆ.

ಕನ್ನಡದಲ್ಲಿ ಬಸವ ಪುರಾಣ, ಶಿವ ತತ್ವ ಚಿಂತಾಮಣಿ, ವೀರಶೈವಾಮೃತ ಮಹಾಪುರಾಣ, ವೃಷಭೇಂದ್ರ ವಿಜಯ, ರಾಘವಾಂಕನ ಚರಿತೆ, ಶರಣ ಲೀಲಾಮೃತ, ಬೋರಬಸವ ಪುರಾಣ, ಭೈರವೇಶ್ವರ ಪುರಾಣದ ಕಥಾಮಣಿ ಸೂತ್ರ ರತ್ನಾಕರ ಮುಂತಾದ ಪುರಾಣಗಳಲ್ಲಿ ಇವರ ಕುರಿತು ವಿವರಗಳಿವೆ. ಕ್ರಿಸ್ತಶಕ 1525ರಲ್ಲಿ ಹೊನ್ನಳ್ಳಿಯ ಗೌರಾಂಕ ಕವಿಯು ಈತನನ್ನು ಕುರಿತು 'ಮೋಳಿಗಯ್ಯನ ಪುರಾಣ' ಎಂಬ ಕಾವ್ಯವನ್ನು ಬರೆದಿದ್ದಾನೆ. ಅಲ್ಲಮ ಪ್ರಭುಗಳು ರಚಿಸಿದ ಶೂನ್ಯ ಸಂಪಾದನೆಯಲ್ಲಿ 'ಮೋಳಿಗಯ್ಯನ ಸಂಪಾದನೆ' ಎಂಬ ಭಾಗವಿದೆ.

ತಾತ್ವಿಕ, ಧಾರ್ಮಿಕ, ಸಾಮಾಜಿಕ, ವಿಡಂಬನಾತ್ಮಕ ಹೀಗೆ ವೈವಿಧ್ಯಮಯವಾದ ವಿಷಯಗಳನ್ನು ಕುರಿತ ಮೋಳಿಗಯ್ಯನವರ ವಚನಗಳು ಅವರ ವಿದ್ವತ್ತು ಮತ್ತು ಅನುಭಾವದ ಹಿರಿಮೆಯನ್ನು ತೋರಿಸುತ್ತವ. ಷಟ್ ಸ್ಥಲ ಸಿದ್ಧಾಂತದ ಕುರಿತು ಅವರು ಹೇಳಿರುವ ವಚನಗಳು ಇಂದಿಗೂ ಪ್ರಸ್ತುತವಾಗಿವೆ.

ಕಲ್ಯಾಣದ ಕ್ರಾಂತಿಯ ಮುನ್ನ ಬಸವಣ್ಣನವರು ಕೂಡಲಸಂಗಮಕ್ಕೆ ತೆರಳಿದರೆ, ಕಲ್ಯಾಣ ಕ್ರಾಂತಿಯ ನಂತರ ಚೆನ್ನಬಸವಣ್ಣನವರ ನೇತೃತ್ವದಲ್ಲಿ ಉಳಿದವರು ವಚನ ಸಾಹಿತ್ಯವನ್ನು ರಕ್ಷಿಸುವ ಸಲುವಾಗಿ ಉಳವಿಯತ್ತ ಪಯಣ ಬೆಳೆಸಿದರು. ಆದರೆ ಕಲ್ಯಾಣದಲ್ಲಿಯೇ ಉಳಿದು ಹೋದ ಮೋಳಿಗೆಯ ಮಾರಯ್ಯನವರು 'ಊರು ಕೆಟ್ಟು ಸೂರೆ ಮಾಡುವಲ್ಲಿ ಯಾರಿಗಾರೂ ಇಲ್ಲ'.... ಎಂದು ತನ್ನೊಂದಿಗೆ ಕಲ್ಯಾಣದಲ್ಲಿ ಯಾರೂ ಉಳಿದುಕೊಂಡಿಲ್ಲ ಎಂದು ನಿಟ್ಟುಸಿರಿಟ್ಟರು.

ಉಪೇಕ್ಷಿತ ವಚನಕಾರರು

ಮುಂದೆ ಹಲವಾರು ವರ್ಷಗಳ ಕಾಲ ಬದುಕಿದ ಮೋಳಿಗೆಯ ಮಾರಯ್ಯನವರು ಬೀದರ ಜಿಲ್ಲೆಯ ಬಸವಕಲ್ಯಾಣದಿಂದ 12 ಕಿಲೋಮೀಟರ್ ದೂರದಲ್ಲಿರುವ ಮೋಳಕೇರಿ ಎಂಬ ಗ್ರಾಮದ ಗವಿಯೊಂದರಲ್ಲಿ ವಾಸವಾಗಿದ್ದರು. ಇಂದಿಗೂ ಅಲ್ಲಿ ಅವರ ಹೆಸರಿನ ಗವಿಯೊಂದಿದೆ.

ಆನೆ ಕುದುರೆ ಭಂಡಾರ ವಿರ್ದಡೇನು
ತಾನುಂಬುದು ಪಡಿಯಕ್ಕಿ, ಒಂದಾವಿನ ಹಾಲು.
ಮಲಗುವುದರ್ಧ ಮಂಚ.
ಈ ಹುರುಳಿಲ್ಲದ ಸಿರಿಯ ನೆಚ್ಚಿ ಕೆಡಬೇಡ ಮನುಜ,
ಒಡಲು ಭೂಮಿಯ ಸಂಗ, ಒಡವೆ ತಾನೇನಪ್ಪುವುದು.
ಕೈ ವಿಡಿದ ಮಡದಿ ಪರರ ಸಂಗ,
ಪ್ರಾಣ ವಾಯುವಿನ ಸಂಗ, ಸಾವಿಂಗೆ ಸಂಗವಾರೂ ಇಲ್ಲ ಕಾಣಾ ..ನಿಃಕಳಂಕ ಮಲ್ಲಿಕಾರ್ಜುನ

ಅದೆಷ್ಟೇ ಸಿರಿ ಸಂಪತ್ತಿದ್ದರೂ ಮನುಷ್ಯ ಒಂದು ಹೊತ್ತಿಗೆ ಪಡಿಯಕ್ಕಿಯಷ್ಟು ಅನ್ನ ಮತ್ತು ಸ್ವಲ್ಪ ಹಾಲು ಸೇವಿಸಲು ಸಾಧ್ಯ.ಅರ್ಧ ಮಂಚದಲ್ಲಿ ಮಲಗುವಷ್ಟೇ ದೇಹವನ್ನು ಹೊಂದಿರುವ ಮನುಷ್ಯನೇ ಈ ಹುರುಳಿಲ್ಲದ ಸಿರಿ ಸಂಪತ್ತನ್ನು ನಂಬಿ ಕೆಡುವುದು ಬೇಡ ಎಲ್ಲವೂ ಪರರ ಪಾಲು.... ನಮ್ಮದು ಎಂಬುದು ಏನಿದ್ದರೂ ನಾವು ಬದುಕಿದ ರೀತಿ ನೀತಿ ಮತ್ತು ನಡೆನುಡಿಗಳು ಮಾತ್ರ ಎಂದು ಸಾರಿದ ಮೋಳಿಗೆಯ ಮಾರಯ್ಯ ಮತ್ತು ಮಹಾದೇವಿ ದಂಪತಿಗಳ ಬದುಕು ಅನುಪಮವಾದದ್ದು. ನಾವೆಲ್ಲರೂ ಆ ದಂಪತಿಗಳು ತೋರಿದ ದಾರಿಯಲ್ಲಿ ಬಾಳಿ ಬದುಕನ್ನು ಬೆಳಗಿಸಿಕೊಳ್ಳುವ .

ದಡ್ಡನೆಂದವನೇ ದಿಗ್ಗಜನಾದಾಗ; ಗುರುವಿನ ಶ್ರಮ ಸಾರ್ಥಕ!

। ಶಿವಬಸಪ್ಪ ಗು ಜಂಗಾಲಿ

ಮನುಷ್ಯನ ಬದುಕಿನಲ್ಲಿ ಕೆಲವು ಸಂಬಂಧಗಳಿಗೆ ಬೆಲೆ ಕಟ್ಟಲು ಸಾಧ್ಯವಿಲ್ಲ. ತಾಯಿ ಜೀವ ನೀಡಿದರೆ, ತಂದೆ ಬದುಕಿಗೆ ಭದ್ರವಾದ ಅಡಿಪಾಯ ಹಾಕುತ್ತಾನೆ. ಆದರೆ ಆ ಬದುಕಿಗೆ ದಿಕ್ಕು, ದೃಷ್ಟಿ, ವಿವೇಕ ಮತ್ತು ಗುರಿಯ ಅರಿವನ್ನು ಮೂಡಿಸುವ ಮಹತ್ತರ ಪಾತ್ರ ಶಿಕ್ಷಕನದು. ಮಗುವಿನ ಕೈಹಿಡಿದು ಮೊದಲ ಅಕ್ಷರ ಕಲಿಸುವುದರಿಂದ ಹಿಡಿದು, ಜೀವನದ ಸವಾಲುಗಳನ್ನು ಧೈರ್ಯದಿಂದ ಎದುರಿಸುವ ಆತ್ಮವಿಶ್ವಾಸ ಬೆಳೆಸುವವರೆಗೆ ಶಿಕ್ಷಕನ ಕೊಡುಗೆ ಅಪಾರ. ಆದ್ದರಿಂದ ಶಿಕ್ಷಕ ಎಂದರೆ ಕೇವಲ ಪಾಠ ಹೇಳುವ ವ್ಯಕ್ತಿಯಲ್ಲ; ಆತ ಭವಿಷ್ಯವನ್ನು ರೂಪಿಸುವ ಶಿಲ್ಪಿ, ವ್ಯಕ್ತಿತ್ವವನ್ನು ಕೆತ್ತುವ ಕಲಾವಿದ ಮತ್ತು ಕನಸುಗಳಿಗೆ ರೆಕ್ಕೆ ನೀಡುವ ಮಾರ್ಗದರ್ಶಕ.

ಪ್ರತಿಯೊಂದು ತರಗತಿಯಲ್ಲೂ ವಿದ್ಯಾರ್ಥಿಗಳ ಸಾಮರ್ಥ್ಯ ಒಂದೇ ರೀತಿಯಾಗಿರುವುದಿಲ್ಲ. ಕೆಲವರು ಪಾಠವನ್ನು ಒಮ್ಮೆ ಕೇಳಿದರೆ ಸಾಕು ಸುಲಭವಾಗಿ ಅರ್ಥಮಾಡಿಕೊಳ್ಳುತ್ತಾರೆ. ಇನ್ನೂ ಕೆಲವರಿಗೆ ಅದೇ ವಿಷಯವನ್ನು ಗ್ರಹಿಸಲು ಹೆಚ್ಚಿನ ಸಮಯ ಬೇಕಾಗುತ್ತದೆ. ಒಬ್ಬನಿಗೆ ಗಣಿತದಲ್ಲಿ ಆಸಕ್ತಿ ಇರಬಹುದು; ಮತ್ತೊಬ್ಬನಿಗೆ ವಿಜ್ಞಾನ, ಭಾಷೆ, ಕ್ರೀಡೆ, ಸಂಗೀತ, ಚಿತ್ರಕಲೆ ಅಥವಾ ತಂತ್ರಜ್ಞಾನದಲ್ಲಿ ಪ್ರತಿಭೆ ಇರಬಹುದು. ಹೀಗಾಗಿ ಕಡಿಮೆ ಅಂಕ ಪಡೆದ ವಿದ್ಯಾರ್ಥಿಯನ್ನು 'ದಡ್ಡ' ಎಂದು ಕರೆಯುವುದು ಅವನ ಸಾಮರ್ಥ್ಯಕ್ಕೆ ಮಾಡುವ ಅನ್ಯಾಯ. ಕಲಿಕೆಯ ವೇಗ ಬೇರೆ ಇರಬಹುದು; ಆದರೆ ಪ್ರತಿಯೊಬ್ಬ ಮಗುವಿನೊಳಗೂ ಯಾವುದೋ ಒಂದು ವಿಶಿಷ್ಟ ಪ್ರತಿಭೆ ಅಡಗಿರುತ್ತದೆ.

ದುರದೃಷ್ಟವಶಾತ್, ಅಂಕಗಳ ಆಧಾರದ ಮೇಲೆ ಮಕ್ಕಳನ್ನು ಅಳೆಯುವ ಪ್ರವೃತ್ತಿ ಇನ್ನೂ ನಮ್ಮ ಸಮಾಜದಲ್ಲಿದೆ. ಪರೀಕ್ಷೆಯಲ್ಲಿ ಕಡಿಮೆ ಅಂಕ ಬಂದ ತಕ್ಷಣ ಇವನಿಂದ ಏನೂ ಆಗುವುದಿಲ್ಲ ಎಂಬ ಹಣೆಪಟ್ಟಿ ಅಂಟಿಸಲಾಗುತ್ತದೆ. ಇಂತಹ ಮಾತುಗಳು ಮಗುವಿನ ಆತ್ಮವಿಶ್ವಾಸವನ್ನು ನಿಧಾನವಾಗಿ ಕುಗ್ಗಿಸುತ್ತವೆ. ಆದರೆ ಒಬ್ಬ ಉತ್ತಮ ಶಿಕ್ಷಕ ವಿದ್ಯಾರ್ಥಿಯ ದೌರ್ಬಲ್ಯವನ್ನು ಮಾತ್ರ ನೋಡುವುದಿಲ್ಲ; ಅದರ ಹಿಂದಿರುವ ಕಾರಣವನ್ನು ಹುಡುಕುತ್ತಾನೆ. 'ನಿನಗೆ ಏಕೆ ಬರುವುದಿಲ್ಲ ಎನ್ನುವುದಕ್ಕಿಂತ ನಿನಗೆ ಹೇಗೆ ಕಲಿಸಿದರೆ ಅರ್ಥವಾಗುತ್ತದೆ' ಎಂದು ಯೋಚಿಸುತ್ತಾನೆ. ಇದೇ ನಿಜವಾದ ಶಿಕ್ಷಕನ ವಿಶೇಷತೆ.

ತರಗತಿಯಲ್ಲಿ ಮೊದಲ ಸ್ಥಾನ ಪಡೆಯುವ ವಿದ್ಯಾರ್ಥಿಯನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯುವುದು ಒಂದು ಸವಾಲಾದರೂ, ಎಲ್ಲರ ಕಣ್ಣಿಗೂ ಹಿಂದುಳಿದವನಂತೆ ಕಾಣುವ ವಿದ್ಯಾರ್ಥಿಯನ್ನು ಕೈಹಿಡಿದು ಮುನ್ನಡೆಸುವುದು ಇನ್ನೂ ದೊಡ್ಡ ಸವಾಲು. ಅದಕ್ಕೆ ಪಾಠದ ಜ್ಞಾನ ಮಾತ್ರ ಸಾಲದು. ತಾಳ್ಮೆ, ಸಹಾನುಭೂತಿ, ಸಮಯ



ಮತ್ತು ಮುಖ್ಯವಾಗಿ ವಿದ್ಯಾರ್ಥಿಯ ಮೇಲಿನ ನಂಬಿಕೆ ಅಗತ್ಯ. 'ನಿನ್ನಿಂದ ಸಾಧ್ಯ' ಎಂಬ ಶಿಕ್ಷಕನ ಒಂದು ಮಾತು, 'ನೀನು ಏನೂ ಮಾಡಲಾರೆ' ಎಂಬ ನೂರು ಮಾತುಗಳನ್ನು ಮೀರಬಲ್ಲದು.

ವಿದ್ಯಾರ್ಥಿಯನ್ನು ಒಂದು ಬೀಜಕ್ಕೆ ಹೋಲಿಸಬಹುದು. ಬೀಜವನ್ನು ನೋಡಿದಾಗ ಅದರೊಳಗಿನ ಹೆಮ್ಮರ ಕಾಣುವುದಿಲ್ಲ. ಆದರೆ ಸೂಕ್ತವಾದ ಮಣ್ಣು, ನೀರು, ಬೆಳಕು ಮತ್ತು ಆರೈಕೆ ದೊರೆತಾಗ ಅದೇ ಬೀಜ ಬೃಹತ್ ಮರವಾಗಿ ಬೆಳೆಯುತ್ತದೆ. ವಿದ್ಯಾರ್ಥಿಯೂ ಹಾಗೆಯೇ. ಅವನೊಳಗಿನ ಪ್ರತಿಭೆಯನ್ನು ಗುರುತಿಸಿ, ಪೋಷಿಸಿ, ಸರಿಯಾದ ದಿಕ್ಕಿನಲ್ಲಿ ಬೆಳೆಸಿದಾಗ ಸಾಮಾನ್ಯನೆಂದು ಕಾಣುತ್ತಿದ್ದ ವಿದ್ಯಾರ್ಥಿಯೇ ಒಂದು ದಿನ ಅಸಾಮಾನ್ಯ ಸಾಧನೆ ಮಾಡಬಹುದು.

ಪ್ರತಿಯೊಂದು ಹೂವೂ ಒಂದೇ ಸಮಯದಲ್ಲಿ ಅರಳುವುದಿಲ್ಲ. ಕೆಲವು ಬೇಗ ಅರಳುತ್ತವೆ; ಕೆಲವು ತಡವಾಗಿ ಅರಳುತ್ತವೆ. ತಡವಾಗಿ ಅರಳಿದ ಹೂವು ಕಡಿಮೆ ಸುಂದರವಲ್ಲ. ಅದೇ ರೀತಿ ತಡವಾಗಿ ಕಲಿಯುವ ವಿದ್ಯಾರ್ಥಿಯೂ ಕಡಿಮೆ ಬುದ್ಧಿವಂತನಲ್ಲ. ಅವನಿಗೆ ಸ್ವಲ್ಪ ಹೆಚ್ಚು ಸಮಯ, ವಿಭಿನ್ನ ಕಲಿಕೆಯ ವಿಧಾನ ಅಥವಾ ಹೆಚ್ಚಿನ ಪ್ರೋತ್ಸಾಹ ಬೇಕಿರಬಹುದು. ಆ ಅವಕಾಶವನ್ನು ನೀಡುವ ಮನಸ್ಸು ಶಿಕ್ಷಕನಲ್ಲಿದ್ದರೆ, ವಿದ್ಯಾರ್ಥಿಯ ಬದುಕಿನ ದಿಕ್ಕೇ ಬದಲಾಗಬಹುದು.

ನಿಜವಾದ ಶಿಕ್ಷಕ ವಿದ್ಯಾರ್ಥಿಗಳನ್ನು ಪರಸ್ಪರ ಹೋಲಿಸುವುದಿಲ್ಲ. ಅವನು ಇಷ್ಟು ಅಂಕ ಪಡೆದಿದ್ದಾನೆ; ನೀನು ಏಕೆ ಪಡೆಯಲಿಲ್ಲ ಎಂದು ಕೇಳುವುದಕ್ಕಿಂತ, 'ನಿನ್ನೆಗಿಂತ ಇಂದು ನೀನು ಎಷ್ಟು ಮುಂದಾಗಿದ್ದೀಯ' ಎಂದು ಪ್ರಶ್ನಿಸುತ್ತಾನೆ. ಹೋಲಿಕೆ ಹೀನಭಾವವನ್ನು ಬೆಳೆಸಬಹುದು; ಆದರೆ ವೈಯಕ್ತಿಕ ಪ್ರಗತಿಯನ್ನು ಗುರುತಿಸುವುದು ಆತ್ಮವಿಶ್ವಾಸವನ್ನು ಬೆಳೆಸುತ್ತದೆ. ಪ್ರತಿಯೊಬ್ಬ ವಿದ್ಯಾರ್ಥಿಯ ಓಟವೂ ವಿಭಿನ್ನ. ಮುಖ್ಯವಾದುದು ಅವನು ನಿಲ್ಲದೆ ಮುಂದೆ ಸಾಗುತ್ತಿದ್ದಾನೆಯೇ ಎಂಬುದು.

ಶಿಕ್ಷಕನಿಗೆ ಸಿಗುವ ಅತ್ಯಂತ ದೊಡ್ಡ ಪ್ರಶಸ್ತಿ ಪದಕವಲ್ಲ, ಸನ್ಮಾನವಲ್ಲ. ಹಲವು ವರ್ಷಗಳ ನಂತರ ಒಬ್ಬ ಹಳೆಯ ವಿದ್ಯಾರ್ಥಿ ಬಂದು, 'ಸರ್, ನಾನು ಸೋತಾಗ ನೀವು ನನ್ನನ್ನು ನಂಬಿದ್ದಿರಿ; ಅದಕ್ಕೇ ಇಂದು ನಾನು ಇಲ್ಲಿ ನಿಂತಿದ್ದೇನೆ' ಎಂದು ಹೇಳುವ ಕ್ಷಣವೇ ಗುರುವಿಗೆ ದೊರೆಯುವ ಅತ್ಯಮೂಲ್ಯ ಗೌರವ. ವಿದ್ಯಾರ್ಥಿಯ ಯಶಸ್ಸಿನಲ್ಲಿ ತನ್ನ ಪರಿಶ್ರಮದ ಒಂದು ಕಣವಾದರೂ ಪ್ರತಿಫಲಿಸುತ್ತಿದೆ ಎಂಬ ಅರಿವು ಶಿಕ್ಷಕನ ಹೃದಯವನ್ನು ತುಂಬುತ್ತದೆ.

ಇಂದು ತಂತ್ರಜ್ಞಾನ ಎಷ್ಟೇ ಮುಂದುವರಿದರೂ, ಶಿಕ್ಷಕನ ಮಾನವೀಯ ಸ್ಪರ್ಶಕ್ಕೆ ಪರ್ಯಾಯವಿಲ್ಲ. ಮಾಹಿತಿ ಬೆರಳ ತುದಿಯಲ್ಲಿ ಸಿಗಬಹುದು; ಆದರೆ ಮಾಹಿತಿಯನ್ನು ಜ್ಞಾನವಾಗಿ, ಜ್ಞಾನವನ್ನು ವಿವೇಕವಾಗಿ ಮತ್ತು ವಿವೇಕವನ್ನು ಜೀವನದ ಮೌಲ್ಯವಾಗಿ ಪರಿವರ್ತಿಸುವಲ್ಲಿ ಶಿಕ್ಷಕನ ಪಾತ್ರ ಅನನ್ಯ. ಯಂತ್ರಗಳು ಉತ್ತರ ನೀಡಬಹುದು; ಆದರೆ ಸರಿಯಾದ ಪ್ರಶ್ನೆ ಕೇಳುವ ಕುತೂಹಲವನ್ನು ಹುಟ್ಟಿಸುವುದು ಗುರುವಿನ ಕೆಲಸ.

ವಿದ್ಯಾರ್ಥಿಯ ಯಶಸ್ಸು ಅವನ ಪರಿಶ್ರಮದ ಫಲವೇ ಸರಿ. ಆದರೆ ಆ ಪರಿಶ್ರಮಕ್ಕೆ ದಿಕ್ಕು ನೀಡಿದ ಗುರುವಿನ ಮಾರ್ಗದರ್